25 June 2026 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಂಬಂಧಗಳಲ್ಲಿ ಬಿರುಕು ಬಿಟ್ಟಾಗ,ಮೂರನೆಯವರು ಮಧ್ಯೆ ಬಂದರೆ ಸೇತುವೆಯಾಗಿ ಬರಬೇಕೇ ಹೊರತು, ಕತ್ತರಿಸುವ ಕೊಡಲಿಯಾಗಬಾರದು!

-ಸ್ನೇಹಾ ಆನಂದ್


ಭೂಸ್ವಾಧೀನ ವಿಚಾರದಲ್ಲಿ ಸಭೆ ಆಯೋಜನೆಗೆ ಸವಾಲು — ಪುಟ ಸಂ. 2


ಸಾರ್ವಜನಿಕರಿಂದ ಜಿಲ್ಲಾಧಿಕಾರಿಗೆ 31 ದೂರುಗಳು ದಾಖಲು — ಪುಟ ಸಂ. 3


ಸಂವಿಧಾನದ ಆಶಯದಂತೆ ಸಿದ್ದರಾಮಯ್ಯ ರಾಜೀನಾಮೆ — ಪುಟ ಸಂ. 4

info.varthaman@gmail.com

9742504916

ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 207 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಕೆಆರ್‌ಎಸ್: ನದಿಗೆ ಹೆಚ್ಚಿನ ನೀರು

## ಸಿಡಬ್ಲ್ಯುಎಂಎ ಸಭೆ ಬೆನ್ನಲ್ಲೇ ತಮಿಳುನಾಡಿಗೆ ನೀರು ಬಿಡುಗಡೆ ಶಂಕೆ?

**ಮೈಸೂರು:** ಕಾವೇರಿ ಕಣಿವೆ ಭಾಗದಲ್ಲಿ ಮುಂಗಾರು ಮಳೆ ಕೊರತೆಯಿಂದ ಕೆಆರ್‌ಎಸ್ ಜಲಾಶಯ ಖಾಲಿ ಆಗುತ್ತಿದೆ. ಆದರೆ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಸಭೆ ನಡೆದ ಮರುದಿನವೇ ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯದಿಂದ ನೀರಿನ ಹೊರ ಹರಿವು ಪ್ರಮಾಣವನ್ನು ಹೆಚ್ಚಿಸಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಜೂ.24ರಂದು ಬುಧವಾರ ಬೆಳಿಗ್ಗೆಯಿಂದಲೇ ಕೃಷ್ಣರಾಜಸಾಗರ ಜಲಾಶಯದಿಂದ ಹೊರ ಹರಿವಿನ ಪ್ರಮಾಣವನ್ನು 1886 ಕ್ಯುಸೆಕ್‌ಗೆ ಏರಿಕೆ ಮಾಡಲಾಗಿದೆ. ಕಬಿನಿ ಜಲಾಶಯ ದಿಂದ 850 ಕ್ಯೂಸೆಕ್ ನೀರು ಹೊರ ಹರಿಸಲಾಗುತ್ತಿದೆ. ಎರಡೂ ಜಲಾಶಯದಿಂದ ಸೇರಿ ಒಟ್ಟು 2736 ಕ್ಯೂಸೆಕ್ ನೀರು ಹರಿಬಿಡಲಾಗುತ್ತಿದೆ.

ಕೆಆರ್‌ಎಸ್ ಜಲಾಶಯದಿಂದ ಬೆಂಗಳೂರು ಸಹಿತ ವಿವಿಧ ನಗರಗಳ ಕುಡಿಯುವ ನೀರಿಗೆ ಜೂನ್ 23ರಂದು 438, ಜೂನ್ 22ರಂದು 431, ಜೂನ್ 2ರಂದು 437 ಕ್ಯೂಸೆಕ್ ಹೊರ ಬಿಡಲಾಗಿದೆ. ಕಬಿನಿ ಜಲಾಶಯದಿಂದ ಜೂನ್ 20 ಹಾಗೂ 22ರಂದು ಯಾವುದೇ ನೀರು ಹರಿ ಬಿಡುತ್ತಿರಲಿಲ್ಲ. ಜೂನ್ 23ರಂದು 300 ಕ್ಯೂಸೆಕ್ ಹರಿಸಲಾಗಿತ್ತು. ಈಗ ಏಕಾಏಕಿ ಮೂರು ಪಟ್ಟು ಪ್ರಮಾಣದ ನೀರು ಬಿಡುಗಡೆ ಮಾಡಲಾಗಿದೆ.

ಕಾವೇರಿ ಜಲವಿವಾದ ನ್ಯಾಯಮಂಡಳಿಯ ತೀರ್ಪನ್ನು ಮಾರ್ಪಡಿಸಿ, 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆ ಮಳೆಯಾದರೆ ವಾರ್ಷಿಕ 740 ಟಿಎಂಸಿ ನೀರು ಲಭ್ಯವಾಗುತ್ತದೆ ಎಂಬುದನ್ನು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಒಪ್ಪಿಕೊಂಡಿವೆ. ಲಭ್ಯವಿರುವ 740 ಟಿಎಂಸಿ ನೀರಿನಲ್ಲಿ ಕರ್ನಾಟಕಕ್ಕೆ 284.75 ಟಿಎಂಸಿ, ತಮಿಳುನಾಡಿಗೆ 404.25 ಟಿಎಂಸಿ, ಕೇರಳಕ್ಕೆ 30 ಟಿಎಂಸಿ ಮತ್ತು ಪುದುಚೇರಿಗೆ 7 ಟಿಎಂಸಿಯಷ್ಟು ನೀರನ್ನು ಸುಪ್ರೀಂ ಕೋರ್ಟ್ ಮರುಹಂಚಿಕೆ ಮಾಡಿತ್ತು.



### ಎಲ್ಲಾ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿತ

ಈ ಬಾರಿ ಮಳೆ ಕೊರತೆಯಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿನ ಜಲಾಶಯಗಳಲ್ಲಿ ವಾಡಿಕೆಯಷ್ಟು ನೀರು ಸಂಗ್ರಹವೇ ಆಗಿಲ್ಲ. ಕೆಆರ್‌ಎಸ್, ಹೇಮಾವತಿ, ಕಬಿನಿ ಹಾಗೂ ಹಾರಂಗಿ ಜಲಾಶಯಗಳಲ್ಲಿ ನಿತ್ಯದ ಒಳ ಹರಿವು ಒಂದು ಸಾವಿರ ಕ್ಯುಸೆಕ್‌ನಷ್ಟಿದೆ. ಪುಟ 2ಕ್ಕೆ


### ಕುಡಿಯುವ ನೀರಿಗೆ ಬಳಕೆ

ಕೆಆರ್‌ಎಸ್ ಜಲಾಶದಿಂದ ಹೊರಹರಿವಿನ ಪ್ರಮಾಣ ಏರಿಕೆ ಮಾಡಿದ್ದೇವೆ. ಇದನ್ನು ಬೆಂಗಳೂರು ಸಹಿತ ವಿವಿಧ ನಗರಗಳ ಕುಡಿಯುವ ನೀರಿಗೆ ಬಳಸಲಾಗುತ್ತಿದೆ. ತಮಿಳುನಾಡಿಗೆ ಹರಿಸುತ್ತಿಲ್ಲ. ಇಷ್ಟು ನೀರು ಬಿಟ್ಟರೆ ಅದು ತಮಿಳುನಾಡು ತಲುಪುವುದಿಲ್ಲ. ಕೊಳ್ಳೇಗಾಲ ಸಮೀಪದ ಶಿವ ಆಣೆಕಟ್ಟೆಯಲ್ಲಿಯೇ ನೀರಿನ ಪುಟ 2ಕ್ಕೆ

### ನೀರು ಬಿಡಲು ಸೂಚಿಸಿಲ್ಲ

ನವದೆಹಲಿಯಲ್ಲಿ ಮಂಗಳವಾರ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಸಭೆಯಲ್ಲಿ ಕಾವೇರಿ ನೀರಿನ ಬಗ್ಗೆ ಪ್ರಸ್ತಾಪವಾಗಿತ್ತು. ಜೂನ್ ತಿಂಗಳ ಪಾಲಿನ ನೀರನ್ನು ಕರ್ನಾಟಕ ಹರಿಸಿಲ್ಲ ಎಂದು ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿತ್ತು.

ನಾಲ್ಕು ಜಲಾಶಯಗಳ ನೀರಿನ ಸಂಗ್ರಹದ ಬಗ್ಗೆ ಕರ್ನಾಟಕದ ಅಧಿಕಾರಿಗಳು ವಿವರ ನೀಡಿ,



ಈ ನೀರು ಕುಡಿಯುವ ಬಳಕೆಗಷ್ಟೇ ಸಾಕಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟಿದ್ದರು. ಈ ನೀರನ್ನು ಕುಡಿಯುವುದಕ್ಕೆ ಬಳಸಲು ಆದ್ಯತೆ ನೀಡಬೇಕು. ಕಡಿಮೆ ನೀರು ಬಯಸುವ ಬೆಳೆಗಳನ್ನು ಈ ವರ್ಷ ಬೆಳೆಯಬೇಕು ಎಂದು ಸಮಿತಿ ರಾಜ್ಯಗಳಿಗೆ ನಿರ್ದೇಶನ ನೀಡಿತ್ತು. ಈ ನಡುವೆಯೂ ನೀರು ಹರಿಸುವ ಪ್ರಮಾಣದಲ್ಲಿ ಏರಿಕೆ ಆಗಿದೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ ಕರ್ನಾಟಕ–ತಮಿಳುನಾಡು ಗಡಿ ಭಾಗದ ಬಿಳಿಗುಂಡ್ಲುವಿನಿಂದ ಜೂನ್‌ನಲ್ಲಿ 9.19 ಟಿಎಂಸಿ ಅಡಿ ಹರಿಸಬೇಕಿದೆ. ಆದರೆ, ಈವರೆಗೆ 2 ಟಿಎಂಸಿ ಅಡಿ ನೀರನ್ನಷ್ಟೇ ಹರಿಸಲಾಗಿದೆ. ಪುಟ 2ಕ್ಕೆ

## ನನಗಿರುವುದು 32 ಎಕರೆ ಭೂಮಿ

### ಸಚಿವ ಎಂ.ಬಿ.ಪಾಟೀಲ್ ಆರೋಪಕ್ಕೆ ಅನಿತಾ ತಿರುಗೇಟು



**ಬೆಂಗಳೂರು:** ಸಚಿವ ಎಂ.ಬಿ.ಪಾಟೀಲ್ ಹೇಳಿರುವಂತೆ ನನ್ನ ಹೆಸರಿನಲ್ಲಿ 100 ಎಕರೆ ಜಮೀನು ಇಲ್ಲ. ನನಗೆ 32 ಎಕರೆ ಜಮೀನು ಮಾತ್ರ ಇದೆ ಎಂದು ಅನಿತಾ ಕುಮಾರಸ್ವಾಮಿ ತಿಳಿಸಿದ್ದಾರೆ.

ನನ್ನ ವಿರುದ್ಧ ರಾಜಕೀಯ ದುರುದ್ದೇಶದಿಂದ ಸುಳ್ಳು ಪ್ರಚಾರ ನಡೆಸಲಾಗುತ್ತಿದೆ. ರಾಜಕೀಯ ಲಾಭಕ್ಕಾಗಿ ಮನೆಯವರನ್ನು ಎಳೆದು ತಂದು ಆರೋಪ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ತಿರುಗೇಟು ನೀಡಿದ್ದಾರೆ.

ವೈಯಕ್ತಿಕ ವಿಚಾರಗಳನ್ನು ರಾಜಕೀಯಕ್ಕೆ ಎಳೆಯಬಾರದು. ವೈಯಕ್ತಿಕ ವಿಚಾರಗಳ ಬಗ್ಗೆ ಚರ್ಚಿಸುವ ಕೀಳುಮಟ್ಟಕ್ಕೆ ಯಾರೂ ಹೋಗಬಾರದು. ಅನಗತ್ಯವಾಗಿ ನನ್ನ ಬಗ್ಗೆ ಹಾಗೂ ನನ್ನ ಕುಟುಂಬದ ಕುರಿತು ಇಲ್ಲಸಲ್ಲದ ಆರೋಪಗಳನ್ನು ಮಾಡಿದರೆ ಅಂತಹವರಿಗೆ ಕಾನೂನು ಮೂಲಕ ಉತ್ತರ ನೀಡುತ್ತೇನೆ ಎಂದು ಎಚ್ಚರಿಸಿದ್ದಾರೆ.

ಇದಕ್ಕೂ ಮುನ್ನ ಮಾತನಾಡಿದ್ದ ಸಚಿವ ಎಂ.ಬಿ.ಪಾಟೀಲ್ ಅವರು, ಬಿಡದಿ ಟೌನ್‌ಶಿಪ್ ನಿರ್ಮಾಣ ವಿಚಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ರಾಜಕೀಯ ಮಾಡುತ್ತಿದ್ದಾರೆ. ಈ ಯೋಜನೆಯನ್ನು ಸ್ವತಃ ಕುಮಾರಸ್ವಾಮಿ ಅವರೇ ಪ್ರಾರಂಭಿಸಿದ್ದರು. ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರಸ್ವಾಮಿ ಅವರಿಗೆ ಸೇರಿದ ಪುಟ 2ಕ್ಕೆ


# ಗ್ರಾಪಂ ವ್ಯಾಪ್ತಿಯಲ್ಲಿ ಮತ್ತೆ 'ಬಿ ಖಾತೆ'

## ಸೆಪ್ಟೆಂಬರ್ ವರೆಗೆ ಅವಧಿ ವಿಸ್ತರಣೆ: ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ

**ಬೆಂಗಳೂರು:** ರಾಜ್ಯದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಮೂನೆ 11ಬಿ ಯಲ್ಲಿ ಖಾತೆಗೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ ವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ಈವರೆಗೆ 10.16 ಲಕ್ಷ ಆಸ್ತಿಗಳಿಗೆ ಬಿ ಖಾತಾ ನೀಡಲಾಗಿದೆ. ಇನ್ನೂ 90 ಲಕ್ಷ ಆಸ್ತಿಗಳಿಗೆ ಎ ಮತ್ತು ಬಿ ಖಾತಾ ನೀಡಬೇಕಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಯಾವುದೇ ವಸತಿ ಬಡಾವಣೆಯಲ್ಲಿ ಸರ್ಕಾರಿ ಎ ಮತ್ತು ಬಿ ಖರಾಬು ಜಮೀನು ಬಳಸಿಕೊಂಡು ಲೇಔಟ್ ನಿರ್ಮಾಣ ಮಾಡಿದ್ದರೆ ಅಂತಹ ಆಸ್ತಿಗಳಿಗೆ ಇ–ಸ್ವತ್ತು ನೀಡದಂತೆ ಸೂಚಿಸಲಾಗಿದೆ. ಇಂತಹ ಸ್ವತ್ತುಗಳನ್ನು ದಿಶಾಂಕ್ ಆಪ್‌ನಲ್ಲಿ ಖರಾಬು ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಹೀಗಾಗಿ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್



ಅಧಿಕಾರಿಗಳ ಸಭೆ ಕರೆದು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಒಟ್ಟು 5928 ಗ್ರಾಮ ಪಂಚಾಯ್ತಿಗಳಿವೆ. ಒಟ್ಟಾರೆ 1.50 ಕೋಟಿ ಆಸ್ತಿಗಳಿವೆ. ಈ ಪೈಕಿ ಈಗಾಗಲೇ 53.53 ಲಕ್ಷ ಸ್ವತ್ತುಗಳಿಗೆ ಇ–ಸ್ವತ್ತು ನೀಡಲಾಗಿದೆ. ಉಳಿದ ಆಸ್ತಿಗಳಿಗೆ ಸಮರೋಪಾದಿಯಲ್ಲಿ ಇ–ಸ್ವತ್ತು ನೀಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಇ–ಸ್ವತ್ತಿಗೆ ಅರ್ಜಿ ಸಲ್ಲಿಸಿ 15 ದಿನಕ್ಕಿಂತ ಪುಟ 2ಕ್ಕೆ

### ಹಳೆಯ ಮನೆಗೆ ಇ ಖಾತೆ

ಗ್ರಾಮಠಾಣಾ ವ್ಯಾಪ್ತಿಯಲ್ಲಿ ದಾಖಲೆ ಇಲ್ಲದ ಹಳೆಯ ಮನೆಗಳಿಗೆ ಇ– ಸ್ವತ್ತು ನೀಡುವ ಸಂಬಂಧ ನಿಯಮಗಳಿಗೆ ತಿದ್ದುಪಡಿ ಮಾಡಲು ಸೂಚನೆ ನೀಡಲಾಗಿದೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ರಾಜ್ಯದಲ್ಲಿ ಸುಮಾರು 65 ಲಕ್ಷ ಆಸ್ತಿಗಳು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತವೆ. ಇದು ಅವರಿಗೆ ಪೂರ್ವಜರಿಂದ ಬಂದ ಬಳುವಳಿಯಾಗಿದೆ. ಕೆಲವರ ಬಳಿ ತಮ್ಮ ಸ್ವತ್ತಿಗೆ ಸಂಬಂಧಿಸಿ ಯಾವುದೇ ದಾಖಲೆ ಇಲ್ಲ. ಹೀಗಾಗಿ ಒಂದು ಬಾರಿ ನಿಯಮಾವಳಿ ಸರಳೀಕರಣ ಮಾಡಿ, ಸಾರ್ವಜನಿಕರ ಆಕ್ಷೇಪಣೆ ಕರೆದು 100 ದಿನಗಳ ಒಳಗೆ ಗ್ರಾಮಠಾಣಾ ಆಸ್ತಿಗಳಿಗೆ ಪುಟ 2ಕ್ಕೆ

# ಮಂಡ್ಯ ಗ್ರಾಪಂಗಳಲ್ಲಿ ಅಕ್ರಮ ಇ–ಖಾತೆ

## ಲೋಕಾಯುಕ್ತ ತನಿಖೆಯಲ್ಲಿ 'ಅಧಿಕಾರಿಗಳ ಕರ್ಮಕಾಂಡ' ಬಯಲು

**ಬೆಂಗಳೂರು:** ಮಂಡ್ಯ ತಾಲ್ಲೂಕಿನ ಬೇಲೂರು ಮತ್ತು ಬೇವಿನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಅಕ್ರಮವಾಗಿ ಇ–ಖಾತಾ ನೀಡಿರುವುದು ಮತ್ತು ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಪರಭಾರೆ ಮಾಡಿರುವುದು ಲೋಕಾಯುಕ್ತ ಪೊಲೀಸರ ತನಿಖೆಯಲ್ಲಿ ಬಹಿರಂಗವಾಗಿದೆ.

ಮಂಡ್ಯ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಈ ಎರಡೂ ಗ್ರಾಮ ಪಂಚಾಯಿತಿಗಳ ಸಮಸ್ಯೆಗಳನ್ನು ಸರಿಪಡಿಸಲು ಕಾಲಕಾಲಕ್ಕೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ ವೀರಪ್ಪ ಇತ್ತೀಚೆಗೆ ಅನಿರೀಕ್ಷಿತ ಭೇಟಿ ನೀಡಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿದ್ದರು. ಆನಂತರ ತನಿಖೆಯಲ್ಲಿ ಈ ಅಕ್ರಮ ಬಯಲಾಗಿದೆ.

ಮಂಡ್ಯ ತಾಪಂ ಕಾರ್ಯನಿರ್ವಾಹಕ ಅಧಿಕಾರಿ (ಇಒ) ಲೋಕೇಶ್ ಮೂರ್ತಿ, ಮಂಡ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಚಾಮರಾಜು ಜೆಸಿ, ಬೇವಿನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಸಿದ್ದರಾಜು, ಬೇಲೂರು ಗ್ರಾಮ ಪಂಚಾಯಿತಿ ನಿವಾಸಗಳು ಮತ್ತು ಕಚೇರಿಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಶೋಧ ನಡೆಸಿದ್ದರು.




ನ್ಯಾಯಮೂರ್ತಿ ವೀರಪ್ಪ ಅವರಿಗೆ ಸಲ್ಲಿಸಿದ ವರದಿ ಪ್ರಕಾರ, ಲೋಕೇಶ್ ಮೂರ್ತಿ ಅವರು ಸಿಬ್ಬಂದಿಗೆ ವಹಿಸಲಾದ ಜವಾಬ್ದಾರಿಗಳನ್ನು ನಿಯಮಿತವಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ಪಂಚಾಯತ್‌ಗಳ ಆಸ್ತಿಗಳನ್ನು ನಿಗದಿತ ಸ್ವರೂಪದಲ್ಲಿ ನಿರ್ವಹಿಸಿಲ್ಲ ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಬೇಲೂರು ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪಿಡಿಒ ಅಕ್ರಮ ಇ–ಖಾತಾ ದಾಖಲೆಗಳನ್ನು ಒಳಗೊಂಡಿರುವ ಒಟ್ಟು 812 ಕಡತಗಳಲ್ಲಿ ಕೇವಲ 347 ಕಡತಗಳನ್ನು ಮಾತ್ರ ಅವರು ಸಲ್ಲಿಸಲು ಸಾಧ್ಯವಾಯಿತು. ಗ್ರಾಮ ಪಂಚಾಯತಿ ಆಸ್ತಿಗಳ 194 ಕಡತಗಳಲ್ಲಿ ಕೇವಲ 30 ಕಡತಗಳು ಮಾತ್ರ ಕ್ರಮಬದ್ಧವಾಗಿವೆ ಎಂದು ತನಿಖೆಯಲ್ಲಿ ಕಂಡುಬಂದಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ವರದಿ ಸಲ್ಲಿಸಿದ ಮೂರು ತಿಂಗಳ ನಂತರವೂ ಪುಟ 2ಕ್ಕೆ

## ಮಡಿಕೇರಿಯಲ್ಲಿ ಮಳೆ

**ಮಡಿಕೇರಿ:** ಕೊಡಗು ಜಿಲ್ಲೆಯ ಮಡಿಕೇರಿ ಸುತ್ತಮುತ್ತಲ ಪ್ರಮುಖ ಪ್ರದೇಶಗಳಲ್ಲಿ ಬುಧವಾರ ವರುಣನ ಪ್ರತ್ಯಕ್ಷನಾಗಿದ್ದಾನೆ. ಒಂದು ಗಂಟೆಗೂ ಹೆಚ್ಚು ಕಾಲ ಜಿಟಿಜಿಟಿ ಮಳೆ ಆಗಿದೆ.

ಮಡಿಕೇರಿ ಸೇರಿದಂತೆ ಗಾಳಿಬೀಡು, ಸುಂಟಿಕೊಪ್ಪ, ಮದೆನಾಡು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗಗಳಲ್ಲಿ ಉತ್ತಮ ಮಳೆಯಾಗಿದೆ. ಜೂನ್ ತಿಂಗಳ ಆರಂಭದ ದಿನಗಳಿಂದಲೂ ಕೊಡಗಿನಲ್ಲಿ ಮುಂಗಾರು ಮಳೆ ತೀವ್ರವಾಗಿ ದುರ್ಬಲಗೊಂಡಿತ್ತು. ಕಾಫಿ ನಾಡಿನಲ್ಲಿ ಸಕಾಲಕ್ಕೆ ಮಳೆಯಾಗದ ಕಾರಣ ಕೃಷಿ ಚಟುವಟಿಕೆಗಳು ಕುಂಠಿತ ಗೊಂಡು ರೈತಾಪಿ ವರ್ಗದ ಜನರಲ್ಲಿ ಆತಂಕ ಮೂಡಿಸಿತ್ತು. ಈಗ ಮಳೆಯಿಂದ ಕಂಗಾಲಾ ಗಿದ್ದ ರೈತರ ಮುಖದಲ್ಲಿ ಮಂದಹಾಸ ಮೂಡಿ ಸುವಂತೆ ಮಾಡಿದೆ. ಕೃಷಿ ಚಟುವಟಿಕೆಗಳಿಗೆ ಮತ್ತೆ ಜೀವ ಬಂದಂತಾಗಿದೆ.

## ವಾರ್ತಾ ಇಲಾಖೆ ಆಯುಕ್ತರಾಗಿ ಎಂ.ಎನ್.ಅನುಚೇತ್ ನೇಮಕ

ಬೆಂಗಳೂರು: ಡಿಐಜಿಪಿ (ನೇಮಕಾತಿ) ಆಗಿದ್ದ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರನ್ನು ವಾರ್ತಾ ಮತ್ತು



ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾಗಿ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ.

ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಜೂನ್ 24 ರ ಬುಧವಾರ ಅಧಿಸೂಚನೆ ಹೊರಡಿಸಿದೆ. ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿಯೂ ಕೂಡ ಇವರನ್ನು ಇರಿಸಲಾಗಿದೆ. ಹಾಲೀ ಆಯುಕ್ತರಾಗಿದ್ದ ಹೇಮಂತ್ ಎಂ.ನಿಂಬಾಳ್ಕರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

## ನನ್ನ ಮೇಲೂ ಇಡಿ ದಾಳಿ ಸಾಧ್ಯತೆ

### ರಾಜಕೀಯ ವಿರೋಧಿಗಳ ಮೇಲೆ ಛೂ ಬಿಡ್ತಾರೆ: ಪ್ರಿಯಾಂಕ್ ಖರ್ಗೆ

**ಬೆಂಗಳೂರು:** ಜಾರಿ ನಿರ್ದೇಶನಾಲಯದ ದಾಳಿಗಳ ಸ್ವರೂಪ ಮತ್ತು ಅವುಗಳ ರಾಜಕೀಯ ಉದ್ದೇಶಗಳ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕಳವಳ ವ್ಯಕ್ತಪಡಿಸಿದರು.



ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ನನ್ನ ಮೇಲೂ ಇಡಿ ದಾಳಿ ನಡೆಯುವ ಸಾಧ್ಯತೆ ಇದೆ. ಇವತ್ತಲ್ಲ ನಾಳೆ ಅದು ಆಗಬಹುದು. ಯಾವಾಗ ಬೇಕೋ ಆವಾಗ ಇಡಿಯನ್ನು ಛೂ ಬಿಡ್ತಾರೆ ಎಂದು ಕೇಂದ್ರ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಕೇಂದ್ರ ತನಿಖಾ ಸಂಸ್ಥೆಗಳಾದ ಐಟಿ, ಇಡಿ ಮತ್ತು ಸಿಬಿಐ ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿವೆ. ಕಳೆದ 12 ವರ್ಷಗಳಲ್ಲಿ ದೇಶಾದ್ಯಂತ ಸಾವಿರಾರು ಇಡಿ ದಾಳಿ ನಡೆದಿವೆ. ಆದರೆ, ಈ ದಾಳಿಗಳಲ್ಲಿ ಅಪರಾಧ ಸಾಬೀತಾದ ಪ್ರಕರಣಗಳ ಪ್ರಮಾಣ ಶೇಕಡಾ 1.5 ಕ್ಕಿಂತಲೂ ಕಡಿಮೆ ಇದೆ. ಈ ಅಂಕಿಅಂಶಗಳು ದಾಳಿಗಳು ರಾಜಕೀಯ ಪ್ರೇರಿತವಾಗಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ ಎಂದು ಅವರು ಪ್ರತಿಪಾದಿಸಿದರು. ಪುಟ 2ಕ್ಕೆ

## ಕಾವೇರಿ ನದಿಯಲ್ಲಿ ಮುಳುಗಿ ಒಂದೇ ಕುಟುಂಬದ ಐವರು ಸಾವು

**ಮಂಡ್ಯ:** ಜಿಲ್ಲೆಯ ಮುತ್ತತ್ತಿ ಸಮೀಪದ ಕಾವೇರಿ ನದಿಯಲ್ಲಿ ಮುಳುಗಿ ಒಂದೇ ಕುಟುಂಬದ ಐವರು ಸಾವನ್ನಪ್ಪಿರುವ ದಾರುಣ ಘಟನೆ ಬುಧವಾರ ನಡೆದಿದೆ.


ಮುತ್ತತ್ತಿಯ ಮುತ್ತತ್ತಿರಾಯ ದೇಗುಲಕ್ಕೆ ಪ್ರವಾಸಕ್ಕೆ ಬಂದಿದ್ದ ಒಂದೇ ಕುಟುಂಬದ ವಿಜಯಮ್ಮ (50), ಚೈತ್ರಾ (20), ಶ್ವೇತಾ (38), ಪ್ರಿಯಾಂಕ (28) ಮತ್ತು ಮಹೇಶ್ ಮುಳುಗಿದ್ದಾರೆ. ಸಮೀಪದ ನದಿಯಲ್ಲಿ ಇಳಿದು ಫೋಟೋ ತೆಗೆದುಕೊಳ್ಳುವಾಗ ಮುಳುಗಿ ಪುಟ 2ಕ್ಕೆ



# ಅಬಕಾರಿ ಅಧಿಕಾರಿಗೆ ಇಡಿ ಶಾಕ್

## ಹೆಚ್ಚುವರಿ ಆಯುಕ್ತ ಮಂಜುನಾಥ್ ನಿವಾಸ ಸೇರಿ 6 ಕಡೆ ದಾಳಿ

**ಬೆಳಗಾವಿ:** ರಾಜ್ಯದ ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಅವರಿಗೆ ಇಡಿ (ಜಾರಿ ನಿರ್ದೇಶನಾಲಯ) ಶಾಕ್ ನೀಡಿದೆ. ಬುಧವಾರ ಬೆಳ್ಳಂಬೆಳಗ್ಗೆ ಮೈಸೂರು, ಬೆಳಗಾವಿ ಸೇರಿದಂತೆ ಅವರ ನಿವಾಸ ಮತ್ತು ಸಂಬಂಧಪಟ್ಟ ಕಚೇರಿಗಳ ಮೇಲೆ ಏಕಕಾಲಕ್ಕೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.



ವೈ.ಮಂಜುನಾಥ್ ಅವರು ಬಳ್ಳಾರಿ ಮಾಜಿ ಸಂಸದ ವೈ.ದೇವೇಂದ್ರಪ್ಪ ಪುತ್ರ. ಅಲ್ಲದೆ, ಸಚಿವ ಸತೀಶ್ ಜಾರಕಿಹೊಳಿ ಅವರ ಬಾಮೈದ (ಸಹೋದರಿ ಪತಿ) ಆಗಿರುವ ವೈ. ಮಂಜುನಾಥ್ ಅವರ ಅಕ್ರಮ ಆಸ್ತಿ ಗಳಿಕೆ ಹಾಗೂ ಹಣಕಾಸಿನ ವ್ಯವಹಾರಗಳ ಆರೋಪದಡಿ ಈ ದಾಳಿ ನಡೆದಿದೆ ಎನ್ನಲಾಗಿದೆ.

ಮೈಸೂರಿನಲ್ಲಿರುವ ಕುವೆಂಪು ನಗರದ ಮಂಜುನಾಥ್ ಅವರ ಮನೆ, ಬೆಳಗಾವಿಯ ದೂರದರ್ಶನ ಕೇಂದ್ರದ ಬಳಿ ಇರುವ ನಿವಾಸ ಸೇರಿದಂತೆ ಒಟ್ಟು 6 ಕಡೆಗಳಲ್ಲಿ ದಾಳಿ ನಡೆದಿದೆ. ವಿಜಯನಗರದ ಹರಪನಹಳ್ಳಿ ತಾಲೂಕಿನ ಅರಸೀಕೆರೆ ಗ್ರಾಮದಲ್ಲಿರುವ ಮಂಜುನಾಥ್ ಅವರ ಎರಡು ಮನೆಗಳ ಮೇಲೆಯೂ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ದೀರ್ಘಕಾಲದಿಂದ ಅಬಕಾರಿ ಇಲಾಖೆಯಲ್ಲಿ ಮಂಜುನಾಥ್ ಪ್ರಭಾವಿ ಅಧಿಕಾರಿಯಾಗಿದ್ದಾರೆ. ಈ ಹಿಂದೆ ಅಬಕಾರಿ ಇಲಾಖೆ ಡಿಸಿ ಆಗಿದ್ದಾಗ 2012ರ ಜೂನ್ 27ರಂದು ಲೋಕಾಯುಕ್ತರು ದಾಳಿ ನಡೆಸಿದ್ದರು.

ಮಂಜುನಾಥ್ ಅವರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಕುಟುಂಬಸ್ಥರ ಹೆಸರಿನಲ್ಲಿ ಅಕ್ರಮವಾಗಿ ಬಾರ್‌ಗಳ ಮಾಲೀಕತ್ವ ಹೊಂದಿದ್ದಾರೆ ಎಂಬ ಆರೋಪವಿದೆ.

ಜಾರಕಿಹೊಳಿ ಅವರ ಸಹೋದರಿ ಮಹಾದೇವಿ ಅವರ ಹೆಸರಿನಲ್ಲಿಯೂ ಬಾರ್ ಪರವಾನಗಿ ಪಡೆದಿರುವ ಬಗ್ಗೆ ತನಿಖೆ ನಡೆಯುತ್ತಿದೆ. ಬುಧವಾರ ಬೆಳಿಗ್ಗೆ ಗೋವಾ ಮತ್ತು ಬೆಂಗಳೂರಿನಿಂದ ಆಗಮಿಸಿದ ಇಡಿ ಅಧಿಕಾರಿಗಳು, ಅರೆಸೇನಾ ಪಡೆಯ ಬಿಗಿ ಭದ್ರತೆಯಲ್ಲಿ ದಾಳಿ ನಡೆಸಿದ್ದು, ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

# ಅಯೋಧ್ಯೆ ಶ್ರೀರಾಮಮಂದಿರ ಸ್ಫೋಟಕ್ಕೆ ಸಂಚು

## ದಾವಣಗೆರೆ: ವಿಚಾರಣೆಯಲ್ಲಿ ಶಂಕಿತ ಉಗ್ರನ ಆತಂಕಕಾರಿ ಸ್ಕೆಚ್ ಬಯಲು

**ದಾವಣಗೆರೆ:** ಹರಿಹರದಲ್ಲಿ ಬಂಧಿತನಾಗಿದ್ದ ಶಂಕಿತ ಉಗ್ರ ಸುಹೇಲ್, ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ ಬಗ್ಗೆ ಪೊಲೀಸರ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ.

ಉತ್ತರ ಪ್ರದೇಶದ ಶಂಕಿತ ಉಗ್ರ ಸುಹೇಲ್ ನನ್ನು ಹರಿಹರದಲ್ಲಿ ಬಂಧಿಸಲಾಗಿತ್ತು. ಪೊಲೀಸ್ ವಿಚಾರಣೆ ವೇಳೆ ದೇಶವನ್ನೇ ಬೆಚ್ಚಿಬೀಳಿಸುವಂತಹ ಸ್ಫೋಟಕ ಮಾಹಿತಿ ಬಯಲಾಗಿದೆ. ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ ಎನ್ನಲಾಗಿದೆ.

ದೇಶದ ಕೋಟ್ಯಂತರ ಹಿಂದುಗಳ ಆರಾಧ್ಯ ದೈವ ಅಯೋಧ್ಯೆ ರಾಮ ಮಂದಿರವನ್ನು ಬಾಂಬ್ ಇಟ್ಟು ಸ್ಫೋಟಿಸಲು ನಾನು ಬಯಸಿದ್ದೆ ಎಂದು 20 ವರ್ಷದ ಶಂಕಿತ ಉಗ್ರ ಸುಹೇಲ್, ತನಿಖಾಧಿಕಾರಿಗಳ ಮುಂದೆ ಅತ್ಯಂತ ಭಯಾನಕ ಸಂಚನ್ನು ಒಪ್ಪಿಕೊಂಡಿದ್ದಾನೆ.

ಈತನ ಮೊಬೈಲ್‌ನಲ್ಲಿ ಪಾಕಿಸ್ತಾನದ ಕೋಡ್ ಹೊಂದಿರುವ ಗ್ರೂಪ್‌ಗಳು ಹಾಗೂ ಮಾರಕಾಸ್ತ್ರಗಳನ್ನು ಹಿಡಿದಿರುವ



ಚಿತ್ರಗಳು ಪತ್ತೆಯಾಗಿವೆ. ದೇಶದಲ್ಲಿ ದೊಡ್ಡ ಮಟ್ಟದ ವಿಧ್ವಂಸಕ ಹಾಗೂ ಸಮಾಜ ಘಾತಕ ಚಟುವಟಿಕೆಗಳನ್ನು ನಡೆಸಿ ಸಾವು–ನೋವು ಸೃಷ್ಟಿಸಲು ಈತ ಮತ್ತು ಈತನ ತಂಡ ಸಂಚು ರೂಪಿಸಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ.

### ಪೇಂಟರ್ ಸೋಗಿನಲ್ಲಿ ಅಡಗಿದ್ದ!

ಬಂಧಿತ ಶಂಕಿತ ಉಗ್ರ ಸುಹೇಲ್ ಹರಿಹರ ಪಕ್ಕದ ಕೈಗಾರಿಕಾ ಪ್ರದೇಶದ ಫ್ಯಾಕ್ಟರಿಯೊಂದರಲ್ಲಿ ಸಾಮಾನ್ಯ ಪೇಂಟಿಂಗ್ ಕೆಲಸಗಾರನಾಗಿ ಸೇರಿಕೊಂಡು ಯಾರಿಗೂ ಅನುಮಾನ ಬಾರದಂತೆ ಅಡಗಿಕೊಂಡಿದ್ದ. ಈತನ ಚಟುವಟಿಕೆಗಳ ಮೇಲೆ ನಿಗಾ ಇಟ್ಟಿದ್ದ ಪೊಲೀಸರು ಕಾರ್ಯಾಚರಣೆ ನಡೆಸಿ ಮಂಗಳವಾರ ಬಂಧಿಸಿದ್ದರು. ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಪೊಲೀಸರು ಈತನ ಮೊಬೈಲ್ ಫೋನ್ ಅನ್ನು ಪರಿಶೀಲಿಸಿದಾಗ ಅಂತಾರಾಷ್ಟ್ರೀಯ ಉಗ್ರ ಜಾಲದೊಂದಿಗೆ ಹೊಂದಿದ್ದ ಸಂಪರ್ಕದ ಪ್ರಮುಖ ಸುಳಿವುಗಳು ಲಭ್ಯವಾಗಿವೆ. ಈತನ ಫೋನ್‌ನಲ್ಲಿ ಪಾಕಿಸ್ತಾನ ಕೋಡ್ ಹೊಂದಿರುವ ಮೊಬೈಲ್ ಸಂಖ್ಯೆ ರಾಣಾ ಬಾಯ್ ಎಂಬ ಹೆಸರಿನಲ್ಲಿ ಇತ್ತು.

ಬಿಡದಿ ಸಮಗ್ರ ನಗರ ಯೋಜನೆ

# ಭೂಸ್ವಾಧೀನ ವಿಚಾರದಲ್ಲಿ ಸಭೆ ಆಯೋಜನೆಗೆ ಸವಾಲು

## ಬೇನಾಮಿ ಆಸ್ತಿ ಯಾರದ್ದು? ನಮ್ಮ ಬಳಿ ಪಟ್ಟಿ ಇದೆ | ಸರ್ಕಾರದಿಂದಲೇ ಸಭೆ ಆಯೋಜನೆ ಆಗಲಿ: ಎ.ಮಂಜುನಾಥ್

ರಾಮನಗರ: ಇದೇ ಜೂನ್ 27ರ ಶನಿವಾರ ಬೈರಮಂಗಲದಲ್ಲಿ ಸರ್ಕಾರದವತಿಯಿಂದಲೇ ಸಭೆಯನ್ನು ಆಯೋಜಿಸಿ, ಬಿಡದಿ ಸಮಗ್ರ ನಗರ ಯೋಜನೆಗೆ ಭೂಸ್ವಾಧೀನಕ್ಕೆ ಗುರುತಾಗಿರುವ ಭೂಮಾಲೀಕರು ಮತ್ತು ಗ್ರಾಮಸ್ಥರನ್ನು ಕರೆಸಲಿ. ಭೂಸ್ವಾಧೀನಕ್ಕೆ ಎಷ್ಟು ಮಂದಿ ಮಾಲೀಕರು ಒಪ್ಪಿದ್ದಾರೆ, ಎಷ್ಟು ಮಂದಿ ಒಪ್ಪಿಗೆ ನೀಡಿಲ್ಲ ಎಂಬ ವಿಚಾರ ಎಲ್ಲರ ಮುಂದೆ ಬಹಿರಂಗವಾಗಲಿ ಎಂದು ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ. ಮಂಜುನಾಥ್, ಹಾಲಿ ಶಾಸಕ ಎಚ್.ಸಿ.ಬಾಲಕೃಷ್ಣರಿಗೆ ಸವಾಲು ಒಡ್ಡಿದ್ದಾರೆ.

ಬಿಡದಿಯ ತಮ್ಮ ನಿವಾಸದಲ್ಲಿ ಆಯೋಜನೆಯಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಬೈರಮಂಗಲದಲ್ಲಿ ಸಭೆ ಅಯೋಜನೆಯಾಗಲಿ, ಸಿಎಂ ಡಿಕೆಶಿ ಜೊತೆಗೆ ತಾವು ಚರ್ಚೆಗೆ ಸಿದ್ದ ಎಂದು ಎಚ್.ಡಿ. ಕುಮಾರಸ್ವಾಮಿ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಶಾಸಕ ಬಾಲಕೃಷ್ಣ, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ, ಹೀಗಾಗಿ ಬೈರಮಂಗಲಕ್ಕಿಂತ ವಿಧಾನ ಸೌಧದಲ್ಲೇ ಚರ್ಚೆಯಾಗಲಿ ಎಂದು ಹೇಳಿಕೆ ನೀಡಿದ್ದರು. ಬಾಲಕೃಷ್ಣರ ಹೇಳಿಕೆಗೆ ಉತ್ತರವಾಗಿ ಮಾಜಿ ಶಾಸಕ ಎ.ಮಂಜುನಾಥ್ ಪತ್ರಿಕಾಗೋಷ್ಠಿ ಆಯೋಜಿಸಿದ್ದರು.

ಜೂ 27ರಂದು ಹೀಗೆ ನಡೆಯುವ ಸಭೆಗೆ ಸಿಎಂ ಡಿ.ಕೆ.ಶಿವಕುಮಾರ್ ಅವರ ಜೊತೆಗೆ ಸಚಿವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವೇದಿಕೆ ಮೇಲೆ ಉಪಸ್ಥಿತರಿರಲಿ. ಸಭೆಗೆ ಭೂಸ್ವಾಧೀನಕ್ಕೆ ಗುರುತಾಗಿರುವ ಗ್ರಾಮಗಳ ಮಾಲೀಕರು ತಮ್ಮ ಆಧಾರ್ ಕಾರ್ಡಿನೊಂದಿಗೆ ಬರಲಿ, ಅವರ ಗುರುತು ಪತ್ತೇಹಚ್ಚಿಯೇ ಸಭೆಯಲ್ಲಿ ಭಾಗವಹಿಸುವ ವ್ಯವಸ್ಥೆಯಾಗಲಿ. ಭೂಮಾಲೀಕರಲ್ಲದವರು ಭಾಗವಹಿಸುವುದೇ ಬೇಡ. ಆಗ ಸಭೆಯಲ್ಲಿ ಗದ್ದಲ, ಗಲಾಟೆಗೆ ಅವಕಾಶವಾಗುವುದೇ ಇಲ್ಲ. ಸಭೆಯಲ್ಲಿ ಒಪ್ಪಿಗೆ ಇರುವವರ ಸಂಖ್ಯೆಯನ್ನು ಮಾತ್ರ ಪತ್ತೆಹಚ್ಚಲಿ. ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸುವವರ ಸಂಖ್ಯೆ



ಒಪ್ಪಿಗೆ ಇಲ್ಲದವರ ಸಂಖ್ಯೆಗಿಂತ ಹೆಚ್ಚಾಗಿದ್ದರೆ, ಯೋಜನೆ ಮುಂದುವರೆಯಲು ನಮ್ಮ ತಕಾರರು ಏನೂ ಇಲ್ಲ, ಹಾಗೊಮ್ಮೆ ಒಪ್ಪಿಗೆ ಇಲ್ಲದವರ ಸಂಖ್ಯೆ ಹೆಚ್ಚಾಗಿದ್ದರೆ, ಸರ್ಕಾರ ಭೂಸ್ವಾಧೀನವನ್ನು ಕೈಬಿಡಲಿ ಎಂದರು.

### ಕನಕಪುರಕ್ಕೆ ನೀನು ಹೋಗಿದ್ದಲ್ಲಪ್ಪ!

2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಕುಮಾರಸ್ವಾಮಿ ಮತ್ತು ಡಿ. ಕೆ.ಶಿವಕುಮಾರ್ ನಡುವೆ ಬಹಿರಂಗ ಚರ್ಚೆಗೆ ಕನಕಪುರ ತಾಲ್ಲೂಕಿನಲ್ಲಿ ವೇದಿಕೆ ಸಿದ್ದವಾಗಿತ್ತು. ಆಗ ನೀನು (ಎಚ್.ಸಿ.ಬಾಲಕೃಷ್ಣ) ಎಚ್.ಡಿ.ಕುಮಾರಸ್ವಾಮಿ ಜೊತೆಗೆ ಹೋಗಿದ್ದಲ್ಲಪ್ಪ, ಆಗ ಕಾನೂನು ಸುವ್ಯವಸ್ಥೆಗೆ ಭಂಗವಾಯಿತೆ? ಈಗ ಭೂಮಾಲೀಕರ ಜೊತೆ ಚರ್ಚೆಗೆ ಕಾನೂನು ಸುವ್ಯವಸ್ಥೆಗೆ ಭಂಗ ಹೇಗಾಗುತ್ತೆ ಎಂದು ಪ್ರಶ್ನಿಸಿದರು.

### ಬೃಹನ್ನಳೆ ತರಹ ಬೆನ್ನು ತೋರಿಸಬೇಡ!

ಪತ್ರಿಕಾಗೋಷ್ಠಿಯ ಉದ್ದಕ್ಕೂ ಮಾಗಡಿ ಕ್ಷೇತ್ರದ ಹಾಲಿ ಶಾಸಕ ಬಾಲಕೃಷ್ಣರನ್ನು ಏಕವಚನದಲ್ಲೇ ಸಂಬೋಧಿಸಿದ ಮಾಜಿ ಶಾಸಕ ಎ.ಮಂಜುನಾಥ್, ಸರ್ಕಾರ ಸಮಗ್ರ ನಗರ ಯೋಜನೆಯನ್ನು ಕೈಗೆತ್ತಿಕೊಂಡಾಗಲೇ ಶಾಸಕ ಬಾಲಕೃಷ್ಣ, ರೈತರು ಮತ್ತು ಭೂಮಾಲೀಕರ ಬಳಿ ತೆರಳಬೇಕಾಗಿತ್ತು. ಅವರ ಒಪ್ಪಿಗೆ ಪಡೆಯಬೇಕಿತ್ತು. ಒಪ್ಪಿಗೆ ಇಲ್ಲದಿದ್ದರೆ ಸರ್ಕಾರಕ್ಕೆ ನೇರವಾಗಿ ವಿಚಾರ ಮುಟ್ಟಿಸಬಹುದಿತ್ತು. ಆದರೆ ಆತ ಹಾಗೆ ಮಾಡಲೇ ಇಲ್ಲ. ಈಗ ಬೈರಮಂಗಲದಲ್ಲಿ ಸಭೆ ಆಯೋಜನೆ ಮಾಡಲು ಬಾಲಕೃಷ್ಣಗೆ ಧಮ್ಮು, ತಾಕತ್ತು ಇಲ್ಲ. ನನಗೆ ಅವಕಾಶ ಸಿಕ್ಕರೆ ನಾನೇ ಆಯೋಜಿಸುತ್ತೇನೆ. ಹಾಗೊಮ್ಮೆ ಕಾನೂನು ಸುವ್ಯವಸ್ಥೆಗೆ ಭಂಗ ಬಂದರೆ ನಾನೇ ಜವಾಬ್ದಾರಿ ಹೊರುವೆ. ಬೃಹನ್ನಳ ತರಹ ಬೆನ್ನು ಹಾಕಿ ಹೋಗಬೇಡ ಬಾಲಕೃಷ್ಣ ಎಂದು ಮಾತಿನಲ್ಲೇ ತಿವಿದರು.

### ಇಷ್ಟು ಹೋರಾಟಕ್ಕೆ ಬಾಲಕೃಷ್ಣ ಕಾರಣ

ಬಿಡದಿ ಸಮಗ್ರ ನಗರ ಯೋಜನೆಗೆ ಭೂಸ್ವಾಧೀನ ಅಧಿಸೂಚನೆಗೆ ಮುನ್ನ ಬಾಲಕೃಷ್ಣ ಆ ಗ್ರಾಮಗಳ ನಿವಾಸಿಗಳು, ರೈತರು, ಭೂಮಾಲೀಕರ ಬಳಿ ಮಾತನಾಡಬೇಕಿತ್ತು. ಆದರೆ ಆತ ಹಾಗೆ ಮಾಡದಿದ್ದರಿಂದಲೇ ಇಷ್ಟು ದೊಡ್ಡ ಮಟ್ಟದಲ್ಲಿ ಹೋರಾಟಗಳು ನಡೆಯುತ್ತಿವೆ. ಇದಕ್ಕೆಲ್ಲ ಶಾಸಕ ಬಾಲಕೃಷ್ಣ ಕಾರಣ ಎಂದರು. ಶಾಸಕ ಬಾಲಕೃಷ್ಣ ಮತ್ತು ಜಿಬಿಡಿಎ ಅಧ್ಯಕ್ಷ ನಟರಾಜ್ ಅವರ ಮಾತು ಕೇಳಿಕೊಂಡ ಸಿಎಂ ಡಿ.ಕೆ.ಶಿವಕುಮಾರ್ ಅವರು ಅಧಿಸೂಚನೆಯನ್ನು ಹೊರೆಡಿಸಿದ್ದಾರೆ. ಡಿಕೆಶಿ ಅವರಿಗೆ ಕೆಟ್ಟ ಹೆಸರು ತರುತ್ತಿರುವವು ಇವರಿಬ್ಬರೇ ಎಂದು ಹರಿಹಾಯ್ದರು.

### ಕನಿಷ್ಠ ಜ್ಞಾನ ಯಾರಿಗೆಲ್ಲ ಇಲ್ಲ!

ರೈತರ ಸಮ್ಮುಖದಲ್ಲಿಯೇ ಬಹಿರಂಗ ಚರ್ಚೆ ನಡೆಯಲೆಂದು ಮುಖ್ಯಮಂತ್ರಿಗಳನ್ನು ಬೈರಮಂಗಲ ವೃತ್ತಕ್ಕೆ ಆಹ್ವಾನಿಸಿದ ಕುಮಾರಸ್ವಾಮಿ ಅವರಿಗೆ ಕನಿ? ಜ್ಞಾನ ಇಲ್ಲವೆಂದು ಶಾಸಕ ಬಾಲಕೃ? ಹೇಳಿದ್ದಾರೆ. ಕುಮಾರಸ್ವಾಮಿರವರಿಗೆ ಗರಿ? ಜ್ಞಾನ ಇರುವ ಕಾರಣದಿಂದಲೇ ಅವರು ಎರಡು ಬಾರಿ ಮುಖ್ಯಮಂತ್ರಿ, ಸಂಸದರಾಗಿ ಈಗ ಕೇಂದ್ರ ಸಚಿವರಾಗಿದ್ದಾರೆ. ಫಲವತ್ತಾದ ಕೃಷಿ ಭೂಮಿ ಕಬಳಿಸಲು ಹೊರಟಿರುವ ನಿಮ್ಮ ಮುಖ್ಯಮಂತ್ರಿ, ಸಚಿವರು ಹಾಗೂ ಅಧಿಕಾರಿಗಳಿಗೆ ಕನಿ? ಪ್ರಜ್ಞೆ ಇಲ್ಲ ಎಂದು ಎ.ಮಂಜುನಾಥ್ ಕಿಡಿ ಕಾರಿದರು.

### 300 ಎಕರೆ ಗುಳುಂ

ಹಾಲಿ ಶಾಸಕ ಬಾಲಕೃಷ್ಣರ ವಿರುದ್ದ ತಮ್ಮ ಮಾತಿನ ಚಾಟಿಯನ್ನು ಮತ್ತಷ್ಟು ತೀವ್ರಗೊಳಿಸಿದ ಎ. ಮಂಜುನಾಥ್, ಮಾಗಡಿ ತಾಲ್ಲೂಕು ಹುಲಿಕಟ್ಟೆಯಲ್ಲಿ ಗುಂಡು ತೋಪು ಸೇರಿದಂತೆ ಸರ್ಕಾರದ 300ಕ್ಕೂ ಹೆಚ್ಚು ಎಕರೆ ಭೂಮಿ, ತಾವರೆಕೆರೆಯಲ್ಲಿ 25 ಎಕರೆ ಭೂಮಿಯನ್ನು ಬಾಲಕೃಷ್ಣ ಕಬಳಿಸಿದ್ದಾರೆ ಎಂದು ದೂರಿದರು.

### ಪೋಸ್ಟರ್‌ಗಳ ಬಗ್ಗೆ ಎಸ್ಪಿಯವರಿಗೆ ದೂರು

ಬಿಡದಿಯಲ್ಲಿ ಪದೇ ಪದೇ ನಮ್ಮ ನಾಯಕರ ವಿರುದ್ದ ಪೋಸ್ಟರ್‌ಗಳನ್ನು ಅಂಟಿಸುತ್ತಿದ್ದಾರೆ. ಇದು ಜಿಬಿಡಿಎ ಅಧ್ಯಕ್ಷ ನಟರಾಜ್ ಕೃತ್ಯ. ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಈ ಸಂಬಂಧ ದೂರು ನೀಡಿದ್ದೇವೆ. ಅವರು ಸಿಸಿ ಕ್ಯಾಮರಾಗಳನ್ನು ಆಧರಿಸಿ ರಾತ್ರಿ ವೇಳೆ ಕಳ್ಳರಂತೆ ಪೋಸ್ಟರ್ ಅಂಟಿಸಿದವರ ವಿರುದ್ದ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಾವು ಪೋಸ್ಟರ್‌ಗಳನ್ನು ಹಗಲು ಹೊತ್ತಿನಲ್ಲೇ ಎಸ್ಪಿಯವರ ಕಚೇರಿ ಬಳಿಯೇ ಅಂಟಿಸುತ್ತೇವೆ ಎಂದು ಎಚ್ಚರಿಸಿದರು.

### ಬೇನಾಮಿ ಭೂಮಿ ಹೊಂದಿರುವವರ ಪಟ್ಟಿ ನಮ್ಮ ಬಳಿ ಇದೆ

ಎಚ್.ಡಿ.ಕುಮಾರಸ್ವಾಮಿ ಅವರು ಬೈರಮಂಗಲ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಬೇನಾಮಿ ಭೂಮಿ ಹೊಂದಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಮಾಜಿ ಶಾಸಕರು, ಬಾಲಕೃಷ್ಣ ಹಾಲಿ ಶಾಸಕರಾಗಿದ್ದಾರೆ. ಅವರದ್ದೇ ಸರ್ಕಾರವಿದೆ, ಇರುವ ಅಧಿಕಾರ, ಅಧಿಕಾರಿಗಳನ್ನೆಲ್ಲ ಬಳಸಿಕೊಂಡು ತಮ್ಮ ಆರೋಪವನ್ನು ಸಾಭಿತು ಪಡಿಸಲಿ ಎಂದು ಮತ್ತೊಂದು ಸವಾಲು ಎಸೆದರು. ಎಚ್.ಡಿ.ಕುಮಾರಸ್ವಾಮಿ ಅವರು ಬೇನಾಮಿ ಆಸ್ತಿ ಹೊಂದಿದ್ದಾರೆ ಎಂಬ ದಾಖಲೆಯನ್ನು ಅವರು ಬಿಡುಗಡೆ ಮಾಡಲಿ, ಭುಸ್ವಾಧಿನಕ್ಕೆ ಗುರುತಾಗಿರುವ ಭೂಮಿ ಪೈಕಿ ಬೇನಾಮಿ ಆಸ್ತಿ ಯಾರ್‍ಯಾರು ಹೊಂದಿದ್ದಾರೆ ಎಂಬ ಪಟ್ಟಿ ನಮ್ಮ ಬಳಿಯೂ ಇದೆ. ಅದನ್ನು ಸೂಕ್ತ ಸಮಯದಲ್ಲಿ ನಾವು ಸಹ ಬಿಡುಗಡೆ ಮಾಡುತ್ತೇವೆ. ಇಲ್ಲಿ ಜಿಲ್ಲಾಧಿಕಾರಿಗಳು, ಜಿಬಿಡಿಎ ಅಧ್ಯಕ್ಷರು ಮತ್ತು ಇತರರು ಬೇನಾಮಿ ಆಸ್ತಿ ಹೊಂದಿದ್ದಾರೆ ಎಂದು ಆರೋಪಿಸಿದರು.

### ಎಂ.ಬಿ.ಪಾಟೀಲ್‌ಗೆ ಎ.ಮಂಜುನಾಥ್ ಸಲಹೆ

ಬಿಡದಿ ಸಮಗ್ರ ನಗರ ಯೋಜನೆಗೆ ಗುರುತಾಗಿರುವ ಭೂಮಿಯ ಪೈಕಿ ಎಚ್.ಡಿ.ಕೆ ಅವರ ಬೇನಾಮಿ ಆಸ್ತಿ , ಅನಿತಾಕುಮರಸ್ವಾಮಿ ಮತ್ತು ಅವರ ಕುಟುಂಬದವರ 100 ಎಕರೆ ಭೂಮಿ ಇದೆ ಎಂದು ಸಚಿವ ಎಂ.ಬಿ.ಪಾಟೀಲ್ ಸಹ ಹೇಳಿಕೆ ನೀಡಿದ್ದಾರೆ. ಪೋಲಿ–ಪುಕ್ಕಾಗಗಳು ಹೇಳುವ ಮಾತಗಳನ್ನು ಸಚಿವ ಎಂ.ಬಿ.ಪಾಟೀಲ್ ತಮ್ಮ ಬಾಯಿಯಿಂದ ಹೇಳಿ ಹೊಸಲು ಮಾಡಿಕೊಳ್ಳುವುದು ಬೇಡ ಎಂದು ಎ.ಮಂಜುನಾಥ್ ಸಲಹೆ ನೀಡಿದರು.

# ಜು.1ರಿಂದ ಮುಂಗಾರು ಬೆಳೆ ಸಮೀಕ್ಷೆ: ಜಿಲ್ಲಾಧಿಕಾರಿ

ಮೈಸೂರು: ಜಿಲ್ಲೆಯಲ್ಲಿ ಈ ವರ್ಷ ಬರಗಾಲದ ಮುನ್ಸೂಚನೆ ಇರುವುದರಿಂದ ಯಾವುದೇ ಕಾರಣಕ್ಕೂ ಬೆಳೆ ಸಮೀಕ್ಷೆಯಲ್ಲಿ ಲೋಪವಾಗಬಾರದು ಮತ್ತು ಶೇಕಡಾ 100 ರಷ್ಟು ಸಮಿಕ್ಷೆಯಲ್ಲಿ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮೀಕಾಂತ ರೆಡ್ಡಿ ಹೇಳಿದರು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಬೆಳೆ ಸಮೀಕ್ಷೆ ಅನುಷ್ಠಾನ ಸಮಿತಿ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ದ್ವಿದಳಧಾನ್ಯಗಳಲ್ಲಿ ಆತ್ಮ ನಿರ್ಭರತೆ ಅಭಿಯಾನ, ಹಾಗೂ ಎಣ್ಣೆ ಕಾಳು ಅಭಿಯಾನ ಸಮಿತಿಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಪೂರ್ವ ಮುಂಗಾರು ಬೆಳೆ ಸಮೀಕ್ಷೆಯನ್ನು ಮುಂಬರುವ 30 ದಿನಗಳ ಒಳಗಾಗಿ ಕಡ್ಡಾಯವಾಗಿ ಮುಗಿಸಬೇಕಾಗಿದೆ. ಜಿಲ್ಲೆಯಲ್ಲಿ ಒಟ್ಟು 9,96,708 ಪ್ಲಾಟ್‌ಗಳಿದ್ದು, ಸಮೀಕ್ಷೆ ನಡೆಸಬೇಕಾಗಿದೆ. ಜಿಲ್ಲೆಯ ಒಟ್ಟು 1,301 ಗ್ರಾಮಗಳಲ್ಲಿ ಈ ಸಮೀಕ್ಷೆ ನಡೆಯಲಿದ್ದು, ಇದಕ್ಕಾಗಿ 1009 ಪಿ.ಆರ್ ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಪ್ರತಿ ಬಾರಿ ಸಮೀಕ್ಷೆಯು ಶೇ.94 ರಿಂದ ಶೇ. 96ರಷ್ಟು ಮಾತ್ರ ಪ್ರಗತಿ ಕಾಣುತ್ತಿದ್ದು, ಕೆಲವೊಂದು ಭಾಗಗಳು ಕೈಬಿಟ್ಟು ಹೋಗುತ್ತಿವೆ. ಆದರೆ, ಈ ಬಾರಿ ಶೇ.1 ರಷ್ಟು ಸಮೀಕ್ಷೆ ಬಾಕಿ ಉಳಿದರೂ ಸುಮಾರು 9,000 ರೈತರು ಯೋಜನೆಯಿಂದ ವಂಚಿತರಾಗುತ್ತಾರೆ.



ಬರಗಾಲ ಘೋಷಣೆಯಾಗಿ ರೈತರಿಗೆ ಪರಿಹಾರ ನೀಡಬೇಕಾದ ಸಂದರ್ಭದಲ್ಲಿ ಬೆಳೆ ಸಮೀಕ್ಷೆಯ ಆಧಾರದ ಮೇಲೆಯೇ ಪರಿಹಾರ ವಿತರಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ಒಬ್ಬ ರೈತರು ಕೂಡ ಸಮೀಕ್ಷೆಯಿಂದ ಹೊರಗುಳಿಯಬಾರದು ಎಂದು ತಿಳಿಸಿದರು.

ಸಮೀಕ್ಷೆ ಕಾರ್ಯಕ್ಕೆ ಸರಿಯಾಗಿ ಸ್ಪಂದಿಸದ ನಿಷ್ಕ್ರಿಯರಾಗಿರುವ ಅಥವಾ ಕೊನೆ ಕ್ಷಣದಲ್ಲಿ ಕೈಕೊಡುವ ಪಿ.ಆರ್ ಗಳನ್ನು ಈಗಲೇ ಗುರುತಿಸಿ, ಅವರ ಜಾಗಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ವಹಿಸಲಾಗಿದೆ. ಈ ವಿಷಯದಲ್ಲಿ ತಹಸೀಲ್ದಾರ್‌ಗಳಿಗೂ ಕೂಡ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗುವುದು. ರಾಜ್ಯದಲ್ಲಿ ಫ್ರೂಟ್ ಐಡಿ ಇರುವಂತೆ ಸೆಂಟ್ರಲ್ ಫ್ರೂಟ್ ಐಡಿಯನ್ನು ಕ್ರಿಯೇಟ್ ಮಾಡಬೇಕಿದ್ದು, 50194 ಸೆಂಟ್ರಲ್ ಫ್ರೂಟ್ ಐಡಿ ಬಾಕಿ ಇರುತ್ತದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ಪ್ರೋತ್ಸಾಹ ಧನ ನೀಡಲು ಸೆಂಟ್ರಲ್ ಫ್ರೂಟ್ ಐಡಿ ಅವಶ್ಯಕವಾಗಿರುತ್ತದೆ. ಆದ್ದರಿಂದ ಇದನ್ನು ಆದ್ಯತೆಯ ಮೇಲೆ ಮಾಡಬೇಕು. ರಾಜ್ಯದ ಫ್ರೂಟ್ ಐಡಿಯಲ್ಲಿ ಜಿಲ್ಲೆಯಲ್ಲಿ 3,31,342, ಫ್ರೂಟ್ಸ್ ಐಡಿಗಳಿಗೆ ಆಪ್ ಅಡಿಯಲ್ಲಿ ರೈತರ ಕೆಲವು ಪ್ಲಾಟ್‌ಗಳು ಮಾತ್ರ ನೊಂದಣಿಯಾಗಿದ್ದು, ಉಳಿದಿರುವ ಪ್ಲಾಟ್‌ಗಳನ್ನು ಫ್ರೂಟ್ಸ್ ಐಡಿಯಲ್ಲಿ ಸೇರ್ಪಡೆ ಮಾಡುವಂತೆ ಸೂಚನೆ ನೀಡಿದರು. ಕೃಷಿ ಜಂಟಿ ನಿರ್ದೇಶಕರಾದ ಕೆ.ಹೆಚ್.ರವಿ ಮಾತನಾಡಿ ಈ ಬಾರಿ ಬರಗಾಲದ ಪರಿಸ್ಥಿತಿ ಇರುವುದರಿಂದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರೈತರು ನೋಂದಾಯಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್ ಉಪಸ್ಥಿತರಿದ್ದರು.

# ನ್ಯಾಯಾಲಯಕ್ಕೆ ಹುಸಿಬಾಂಬ್ ಬೆದರಿಕೆ

ಚಾಮರಾಜನಗರ: ಇಲ್ಲಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಅಪರಿಚಿತರಿಂದ ಹುಸಿಬಾಂಬ್ ಬೆದರಿಕೆಯ ಇ–ಮೇಲ್ ಸಂದೇಶ ಬಂದ ಹಿನ್ನೆಲೆಯಲ್ಲಿ ಕೋರ್ಟ್ ಆವರಣದಲ್ಲಿ ಕೆಲಕಾಲ ತೀವ್ರ ಆತಂಕ ಹಾಗೂ ಸಾರ್ವಜನಿಕರಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಪೊಲೀಸ್ ಜಾಗೃತರಾಗಿದ್ದು, ಬಾಂಬ್ ನಿಗ್ರಹ ದಳ ಹಾಗೂ ಶ್ವಾನದಳದೊಂದಿಗೆ ಇಡೀ ನ್ಯಾಯಾಲಯದ ಸಂಕೀರ್ಣದಲ್ಲಿ ವ್ಯಾಪಕ ತಪಾಸಣೆ ನಡೆಸಿದ್ದಾರೆ.

ನ್ಯಾಯಾಲಯದ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳ ಗಮನಕ್ಕೆ ಈ ಸ್ಫೋಟಕ ಇ–ಮೇಲ್ ಸಂದೇಶ ಬಂದ ತಕ್ಷಣವೇ, ಅವರು ಯಾವುದೇ ಅಪಾಯಕ್ಕೆ ಆಸ್ಪದ ನೀಡದೆ ಕೂಡಲೇ ಸ್ಥಳೀಯ ಪೊಲೀಸರಿಗೆ ಮಾಹಿತಿ ರವಾನಿಸಿದರು. ವಿಷಯ ತಿಳಿಯುತ್ತಿದ್ದಂತೆ ಎಚ್ಚೆತ್ತ ಜಿಲ್ಲಾ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳದ ವಿಶೇಷ ಸಿಬ್ಬಂದಿಯೊಂದಿಗೆ ತಕ್ಷಣವೇ ನ್ಯಾಯಾಲಯದ ಕಟ್ಟಡಕ್ಕೆ ಧಾವಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಹಿರಿಯ ಪೊಲೀಸ್ ಅಧಿಕಾರಿಗಳು ಪರಿಸ್ಥಿತಿಯನ್ನು ಅವಲೋಕಿಸಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಿಬ್ಬಂದಿಗೆ



ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ, ನ್ಯಾಯಾಲಯದ ಆವರಣದೊಳಗೆ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರ ಪ್ರವೇಶವನ್ನು ಪೊಲೀಸರು ತಾತ್ಕಾಲಿಕವಾಗಿ ಸಂಪೂರ್ಣವಾಗಿ ನಿರ್ಬಂಧಿಸಿದ್ದರು. ಕೋರ್ಟ್ ಒಳಗೆ ಇದ್ದವರನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸಲಾಯಿತು. ಈ ಹಠಾತ್ ಬೆಳವಣಿಗೆಯಿಂದಾಗಿ ನ್ಯಾಯಾಲಯದ ದೈನಂದಿನ ಪ್ರಮುಖ ಕಾರ್ಯಚಟುವಟಿಕೆಗಳು ಹಾಗೂ ಪ್ರಕರಣಗಳ ವಿಚಾರಣೆಯ ಮೇಲೆ ಕೆಲಕಾಲ ಗಂಭೀರ ಪರಿಣಾಮ ಬೀರಿತು. ಇಡೀ ಆವರಣವನ್ನು ಜಾಲಾಡಿದ ನಂತರ ಇದು ಕೇವಲ ಹುಸಿಬಾಂಬ್ ಕರೆ ಎಂಬುದು ಖಾತರಿಯಾಗಿದ್ದು, ಸದ್ಯ ಸಾರ್ವಜನಿಕರು ನಿಟ್ಟುಸಿರು ಬಿಡುವಂತಾಗಿದೆ.

## ಮೊದಲ ಪುಟದಿಂದ

### ಹಳೆಯ ಮನೆಗೆ ಇ ಖಾತೆ

ಸಮರೋಪಾದಿಯಲ್ಲಿ ಇ–ಖಾತಾ ವಿತರಿಸಲು ಸೂಚಿಸಲಾಗಿದೆ ಎಂದು ಅವರು ಹೇಳಿದರು. ಗ್ರಾಮೀಣ ಜನರಿಗೆ ಆಸ್ತಿಯ ಹಕ್ಕು ನೀಡಬೇಕು ಎಂಬುದು ಮುಖ್ಯಮಂತ್ರಿ ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ಗ್ರಾಮೀಣ ಜನರಿಗೆ ತೊಂದರೆ ಆಗದ ರೀತಿಯಲ್ಲಿ ಮತ್ತು ಸರ್ಕಾರದ ಆಸ್ತಿಗಳನ್ನು (ಖರಾಬು, ಗೋಮಾಳ ಇತ್ಯಾದಿ) ಸಂರಕ್ಷಿಸಿಕೊಂಡು, ಸ್ವಾಧೀನದಲ್ಲಿರುವವರಿಗೆ ಖಾತಾ ನೀಡಲು ಕ್ರಮ ವಹಿಸಲಾಗುವುದು ಎಂದು ಖಂಡ್ರೆ ತಿಳಿಸಿದರು.

### ಕುಡಿಯುವ ನೀರಿಗೆ ಬಳಕೆ

ಪ್ರಮಾಣ ಕಡಿಮೆ ಇರುವುದರಿಂದ ಅಲ್ಲಿ ಸಂಗ್ರಹವಾಗಬಹುದೇ ವಿನಃ ತಮಿಳುನಾಡಿಗೆ ಉಪಯೋಗವಾಗುವುದಿಲ್ಲ ಎಂದು ಕೃಷ್ಣರಾಜಸಾಗರ ಜಲಾಶಯದ ಅಧೀಕ್ಷಕ ಇಂಜಿನಿಯರ್ ರಘುರಾಂ ತಿಳಿಸಿದ್ದಾರೆ.

### ನನ್ನ ಮೇಲೂ ಇಡಿ ದಾಳಿ ಸಾಧ್ಯತೆ

ಸಚಿವ ಸತೀಶ್ ಜಾರಕಿಹೊಳಿ ಸಂಬಂಧಿಕರ ಮನೆ ಮೇಲೆ ಇಡಿ ದಾಳಿಯಾದ ಬೆನ್ನಲ್ಲೇ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದಾರೆ. ಬಲಿತ ದಲಿತರು ಎಷ್ಟು ಜನ ಇದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತೋರಿಸಲಿ ಎಂದು ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ. ಎಷ್ಟು ಜನ ಬಲಿತ ದಲಿತರು ಇದ್ದಾರೆಂದು ತೋರಿಸಲಿ. ಇವರ ಮನಸ್ಥಿತಿ ಹಿಂದಿನಿಂದ ಹೀಗೆಯೇ ಇದೆ. ಆರ್ ಎಸ್ ಎಸ್ ಬಗ್ಗೆ ಮಾಹಿತಿ ಕೇಳಿದರೇ ವೈಯಕ್ತಿಕವಾಗಿ ಮಾತನಾಡುತ್ತಿದ್ದಾರೆ. ಆರ್ ಎಸ್ ಎಸ್ ಆದಾಯ ಕೇಳಿದರೇ ಇವರಿಗೇಕೆ ಉರಿ. ಒಬ್ಬ ದಲಿತ ಆರ್ ಎಸ್ ಎಸ್ ಬಗ್ಗೆ ಕೇಳಲೇ ಬಾರದೇ ಎಂದು ಪ್ರಶ್ನಿಸಿದರು.

ಮೋಹನ್ ಭಾಗವತ್ ಬೆಂಗಳೂರಿಗೆ ಬರುತ್ತಿದ್ದಾರಂತೆ. ನೋಂದಣಿ ದಾಖಲೆ ತರ್ತಿದ್ದಾರೋ ಏನೋ ಗೊತ್ತಿಲ್ಲ. ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮೊದಲು ಉತ್ತರ ಕೊಡಲಿ ಎಂದು ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

### ನನಗಿರುವುದು 32 ಎಕರೆ ಭೂಮಿ

ಸುಮಾರು 100 ಎಕರೆ ಜಮೀನು ಸಹ ಈ ಯೋಜನೆ ವ್ಯಾಪ್ತಿಯಲ್ಲಿ ಬರುತ್ತದೆ. ಹೀಗಾಗಿ ಈಗ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಶುದ್ಧ ನಾಟಕ ಎಂದು ಟೀಕಿಸಿದ್ದರು.

### ಗ್ರಾಪಂ ವ್ಯಾಪ್ತಿಯಲ್ಲಿ ಮತ್ತೆ 'ಬಿ ಖಾತೆ'

ಹೆಚ್ಚು ವಿಳಂಬವಾದರೆ ತಾಂತ್ರಿಕ ದೋಷ ಹೊರತುಪಡಿಸಿ, ಉದ್ದೇಶಪೂರ್ವಕ ವಿಳಂಬ ಮಾಡುವ ಪಿಡಿಒಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗುವುದು. ಬಿ ಖಾತೆಗಳನ್ನು ಎ ಖಾತೆಯಾಗಿ ಪರಿವರ್ತಿಸಲು ಮುಂದಿನ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

### ಒಂದೇ ಕುಟುಂಬದ ಐವರು ಸಾವು

ಸಾವನ್ನಪ್ಪಿದ್ದಾರೆ. ಎಲ್ಲರೂ ಚನ್ನಪಟ್ಟಣದವರು. ಅಗ್ನಿಶಾಮಕ ದಳದ ಸಿಬ್ಬಂದಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ ಐವರ ಶವವನ್ನು ಹೊರತೆಗೆದಿದ್ದಾರೆ. ಹಲಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನವಜಾತ ಶಿಶು ಸಾವು:

# ವೈದ್ಯರ ನಿರ್ಲಕ್ಷ್ಯದ ಆರೋಪಿಸಿ ಪ್ರತಿಭಟನೆ

ಮೈಸೂರು: ವೈದ್ಯರ ನಿರ್ಲಕ್ಷ್ಯದಿಂದಲೇ ಹೆರಿಗೆ ವೇಳೆ ನವಜಾತ ಶಿಶು ಸಾವನ್ನಪ್ಪಿದೆ ಎಂದು ಆರೋಪಿಸಿ ಕುಟುಂಬಸ್ಥರು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಕೆವಿಸಿ ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ಗುರುವಾರ ಬನ್ನೂರಿನ ಮಾಕನಹಳ್ಳಿ ಗ್ರಾಮದ ಕಾವ್ಯ ಎಂಬುವವರು ಹೆರಿಗೆಗೆ ಕೆವಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎರಡನೇ ಹೆರಿಗೆಗೆ ದಾಖಲಾಗಿದ್ದರು. ಹೆರಿಗೆ ಬಳಿಕ ಆರೋಗ್ಯವಾಗಿದ್ದ ಮಗು ಕೆಲ ಸಮಯದ ನಂತರ ಸಾವನ್ನಪ್ಪಿದೆ. ಈ ಕುರಿತು ಆಸ್ಪತ್ರೆ ವೈದ್ಯರು ಹೇಳುತ್ತಿದ್ದಂತೆ ಚೆನ್ನಾಗಿದ್ದ ಮಗು ಏಕಾಏಕಿ ಸಾವನ್ನಪ್ಪಲು ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಪೋಷಕರು, ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು. ಜತೆಗೆ ಆಸ್ಪತ್ರೆಯಲ್ಲಿ ಮಗುವನ್ನು ಅದಲು ಬದಲು ಮಾಡಲಾಗುತ್ತಿದೆ. ಡಿಎನ್‌ಎ ಪರೀಕ್ಷೆ ಮಾಡಿಸಿ, ನಮಗೆ ನಮ್ಮ ಮಗು ಕೊಡಿಸಿ ಎಂದು ಆಗ್ರಹಿಸಿದರು.

ದಸಂಸ ಸಂಘಟನೆಯ ಕಾರ್ಯಕರ್ತರು



ವಿಚಾರ ತಿಳಿದು ಸ್ಥಳಕ್ಕಾಗಮಿಸಿ ಪೋಷಕರ ಜತೆಗೂಡಿ ಕೆಲಕಾಲ ಪ್ರತಿಭಟಿಸಿದರು. ಈ ವೇಳೆ ಕಾವ್ಯ ಸಂಬಂಧಿ ರೂಪ ಮಾತನಾಡಿ, ಗುರುವಾರ ತಪಾಸಣೆಗೆಂದು ಆಸ್ಪತ್ರೆಗೆ ಬಂದಿದ್ದೆವು. ಹೆರಿಗೆ ಆಗುತ್ತದೆ ಎಂದು ದಾಖಲು ಮಾಡಿಕೊಂಡರು. ಆದರೆ, ಸೋಮವಾರದವರೆಗೂ ಹೆರಿಗೆ ಆಗಲಿಲ್ಲ. ಮಂಗಳವಾರ ಹೆರಿಗೆಯಾಗಿದೆ. ಹುಟ್ಟಿದಾಗ ಮಗು ಚೆನ್ನಾಗಿತ್ತು. ಆದರೆ, ಬಳಿಕ ಮಗು ಸಾವನ್ನಪ್ಪಿದೆ ಎಂದು ಹೇಳಿದರು. ಇದಕ್ಕೆ ಕಾರಣವನ್ನೂ ಹೇಳಿಲ್ಲ. ಹೊಟ್ಟೆಯಲ್ಲೇ ಸಾವನ್ನಪ್ಪಿದೆ ಎಂದು ಹೇಳುತ್ತಿದ್ದಾರೆ. ವೈದ್ಯರ ನಿರ್ಲಕ್ಷದಿಂದಲೇ ಮಗು ಸಾವನ್ನಪ್ಪಿದೆ. ಲಕ್ಷ ಲಕ್ಷ ಹಣ ಕಟ್ಟಿಸಿಕೊಂಡು ಮೋಸ ಮಾಡುತ್ತಿದ್ದಾರೆ. ನಮಗೆ ನಮ್ಮ ಮಗು ಬೇಕು, ನ್ಯಾಯ ಕೊಡಿಸಿ ಎಂದು ಒತ್ತಾಯಿಸಿದರು. ಸ್ಥಳಕ್ಕೆ ದೇವರಾಜ ಠಾಣೆ ಪೊಲೀಸರು ಭೇಟಿ ನೀಡಿ ಪೋಷಕರನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟರು.

> ತಾಯಿಗೆ ಆರೋಗ್ಯ ಸಮಸ್ಯೆ ಇತ್ತು. ಮೊದಲ ಹೆರಿಗೆಯಲ್ಲಿ ಅವಳಿ ಮಕ್ಕಳು ಸಾವನ್ನಪ್ಪಿದರು. ಇದಾದ ಬಳಿಕ 6 ತಿಂಗಳಲ್ಲೇ ಮತ್ತೆ ಗರ್ಭಿಣಿಯಾಗಿದ್ದರು. ಆಕೆಗೆ ಬಿಪಿ ಹೆಚ್ಚಾಗಿತ್ತು. ಈ ವೇಳೆ ಹೆರಿಗೆ ಮಾಡುವುದು ರಿಸ್ಕ್ ಎಂದು ಪೋಷಕರಿಗೆ ತಿಳಿಸಿದ್ದೆವು. ಅವರ ಆರೋಗ್ಯದಲ್ಲಿನ ಏರುಪೇರಿನಿಂದಾಗಿ ಮಗು ಸಾವನ್ನಪ್ಪಿದೆ. ಇದರಲ್ಲಿ ವೈದ್ಯರ ನಿರ್ಲಕ್ಷ್ಯ ಇಲ್ಲ. ಆಸ್ಪತ್ರೆಗೆ ದಾಖಲಾದಾಗಿನಿಂದ ಸೂಕ್ತ ಚಿಕಿತ್ಸೆ ನೀಡಲಾಗಿದೆ
>
> – ಸುಗುಣ ವೈದ್ಯ ಕೆವಿಸಿ ಆಸ್ಪತ್ರೆ

## ಮೊದಲ ಪುಟದಿಂದ

### ಎಲ್ಲಾ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿತ

ಕೆಆರ್‌ಎಸ್‌ಗೆ 689, ಕಬಿನಿಗೆ 259, ಹಾರಂಗಿಗೆ 304 ಕ್ಯುಸೆಕ್ ನೀರು ಬುಧವಾರ ಬೆಳಿಗ್ಗೆ ಹರಿದು ಬರುತ್ತಿದೆ. ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 81.30 ಅಡಿ, ಕಬಿನಿ ಜಲಾಶಯದ ನೀರಿನ ಮಟ್ಟ 2253.89 ಅಡಿ, ಹಾರಂಗಿ ಜಲಾಶಯದ ನೀರಿನ ಮಟ್ಟ 2825.79 ಅಡಿಯಷ್ಟಿದೆ.

### ಮಂಡ್ಯ ಗ್ರಾಪಂಗಳಲ್ಲಿ ಅಕ್ರಮ ಇ–ಖಾತೆ

ಲೋಕೇಶ್ ಮೂರ್ತಿ ಅವರು, ಪಿಡಿಒ ಮತ್ತು ಇತರ ಸಿಬ್ಬಂದಿ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ಜೊತೆಗೆ ಹೊಳಲು ಗ್ರಾಮದಲ್ಲಿ ವಸತಿ ಬಳಕೆಗೆ ಒಂದು ಭೂಮಿ ಮತ್ತು ಸೋನಗಹಳ್ಳಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ನಿಯಮಗಳನ್ನು ಉಲ್ಲಂಘಿಸಿ ಎರಡು ಭೂಮಿಯನ್ನು ಪರಿವರ್ತಿಸುವ ಯೋಜನೆಗೆ ಅನುಮೋದನೆ ನೀಡಿದ್ದಾರೆ ಎಂದು ತನಿಖೆಯಲ್ಲಿ ಬಹಿರಂಗಗೊಂಡಿದೆ.

# ಅಕ್ರಮ ಮದ್ಯ ಮತ್ತು ಲಾಟರಿ ಮಾರಾಟ ತಡೆಗೆ ಕ್ರಮ

ಪಿರಿಯಾಪಟ್ಟಣ: ಅಕ್ರಮ ಮದ್ಯ ಮಾರಾಟ ಮತ್ತು ಲಾಟರಿ ಮಾರಾಟ ಹಾಗೂ ಬಡ್ಡಿ ದಂದೆಯನ್ನು ತಡೆಗಟ್ಟಲು ಕೋರಿ ಬಂದಿರುವ ದೂರುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್.ಪಿ.ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಪಟ್ಟಣದ ಅರಸು ಕಲಾಭವನದಲ್ಲಿ ಬುಧವಾರ ಏರ್ಪಡಿಸಿದ್ದ ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರಿಂದ ದೂರು ಸ್ವೀಕರಿಸಿ ಮಾತನಾಡಿದ ಅವರು ಪಟ್ಟಣದ ಬಸವೇಶ್ವರ ವೃತ್ತದಿಂದ ಕನಿಷ್ಠ 50 ಮೀ. ದೂರದವರೆಗೆ ಟ್ರಾಫಿಕ್ ಜಾಮ್ ಆಗದಂತೆ ಎಚ್ಚರ ವಹಿಸಿ,ಸಾರ್ವಜನಿಕರು ರಸ್ತೆ ಬದಿಗಳಲ್ಲಿ ಅಡ್ಡ ದಿಡ್ಡಿ ವಾಹನ ನಿಲ್ಲಿಸದಂತೆ ನಿಗಾ ವಹಿಸಿ ಟ್ರಾಫಿಕ್ ಸಿಗ್ನಲ್ ಬಳಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ. ರಸ್ತೆ ಬದಿಗಳಲ್ಲಿ ಹೊಂದಿಕೊಂಡಂತೆ ಇರುವ ಪುಟ್ಪಾತ್ ಅಂಗಡಿ ಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಸಮಸ್ಯೆಯಾಗದಂತೆ ಶೀಘ್ರ ಕ್ರಮವಹಿಸಿ ಎಂದು ಪಟ್ಟಣದ ಠಾಣಾಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದಿನ ಸಭೆಯಲ್ಲಿ ಹಲವಾರು ವಿಷಯಗಳ ಬಗ್ಗೆ ನನ್ನ ಗಮನಕ್ಕೆ ತರಲಾಗಿದೆ ಆದಷ್ಟು ಶೀಘ್ರದಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಲು ಯತ್ನಿಸಲಾಗುವುದು ಎಂದರು. ಸಭೆಯಲ್ಲಿ ಸಮಗ್ರ ಅಭಿವೃದ್ಧಿ



ಎಂಬ ಹಣಕಾಸು ಸಂಸ್ಥೆ ನಮ್ಮ ಬಳಿ ಪಿಗ್ಮಿಹಣ ಮಾಡಿಕೊಂಡಿದ್ದು ಇದುವರೆಗೂ ಹಣಮರ್ ಹತ್ತು ಜನರಿಗೆ ಹಣಮರುಪಾವತಿಸಿಲ್ಲ ಇದೇ ರೀತಿ ಕೆ. ಆರ್.ನಗರ, ಹುಣಸೂರು ತಾಲೂಕುಗಳನ್ನು ಮೋಸ ಮಾಡಿದ್ದು ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಆದರೆ ಪಿರಿಯಾಪಟ್ಟಣದಲ್ಲಿ ಎಫ್ ಎ ಆರ್ ದಾಖಲಾಗಿಲ್ಲ ಎಂದು ಸಾರ್ವಜನಿಕರೊಬ್ಬರು ದೂರಿದರು ಇದಕ್ಕೆ ಸ್ಪಂದಿಸಿದ ಎಸ್ ಪಿ ಸ್ಥಳದಲ್ಲಿ ಹಾಜರಿದ್ದ ಇನ್ಸ್ ಪೆಕ್ಟರ್ ಗೆ ನಾಳೆ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿದರು. ಹುಣಸೂರು ಮತ್ತು ಪಂಚವಳ್ಳಿ ಗ್ರಾಮದ ರೈತರ ಜಮೀನನ್ನು ಬಡ್ಡಿ ವ್ಯವಹಾರಕ್ಕೆ ಕ್ರಯಕ್ಕೆ ಖರೀದಿಸಿರುವ ವ್ಯಕ್ತಿಗಳು ಈಗ ಬಡ್ಡಿ ಮತ್ತು ಅಸಲು ನೀಡಲು ಸಿದ್ಧವಿದ್ದರೂ ಲೇವಾ ಲೇವಾದೇವಿ ನಡೆಸುವವರು ಭೂಮಿ ವಾಪಸ್ ನೀಡುತ್ತಿಲ್ಲ ಎಂದು ರೈತರು ದೂರಿದರು. ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಎಸ್ ಪಿ ಇನ್ಸ್ ಪೆಕ್ಟರ್ ಗೆ ಸೂಚಿಸಿದರು.

ಗೋಣಿಕೊಪ್ಪ ರಸ್ತೆಯಲ್ಲಿ 150 ರಿಂದ 200 ಮೀಟರ್ ಅಂತರದಲ್ಲಿ ಮೂರು ಕಡೆ ಡಿವೈಡರ್ ಗಳನ್ನು ಓಪನ್ ಮಾಡಿದ್ದು ಇದರಿಂದ ಅಪಘಾತ ವಾಗುವ ಸಾಧ್ಯತೆ ಇದೆ ಎಂದು, ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮಧ್ಯಪಾನ ಗಾಂಜಾ ಸೇವನೆ ಸೇರಿದಂತೆ ಅನೈತಿಕ ಚಟುವಟಿಕೆ ನಡೆಯುತ್ತಿದೆ, ಚಿಲ್ಲರೆ ಅಂಗಡಿಗಳಲ್ಲಿ ಮಧ್ಯ ಮಾರಾಟವಾಗುತ್ತಿದೆ, ಬೈಲಕುಪ್ಪೆಟಿ ಟಿಬೇಟನ್ ಕ್ಯಾಂಪ್ ನಲ್ಲಿ ಗಾಂಜಾ ಮತ್ತು ಇಸ್ಪೀಟ್ ದಂಧೆ ನಡೆಯುತ್ತಿದೆ, ಅಪ್ರಾಪ್ತರು ಟ್ರಾಕ್ಟರ್ ಚಾಲನೆ ಮಾಡುವ ಜೊತೆಗೆ ದೊಡ್ಡ ಶಬ್ದದೊಂದಿಗೆ ಸೌಂಡ್ ಸಿಸ್ಟಮ್ ಹಾಕಿಕೊಂಡಿರುತ್ತಾರೆ, ಮೊಬೈಲ್ ಅಂಗಡಿಗಳಲ್ಲಿ ರಿಪೇರಿಗೆ ಮಹಿಳೆಯರ ಮೊಬೈಲ್ ಗಳಲ್ಲಿ ಇರುವ ವಿಡಿಯೋಗಳನ್ನು ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ ಎಂಬುದು ಸೇರಿದಂತೆ ಹಲವು ವಿಷಯಗಳ ಕುರಿತು ಎಸ್ಪಿಗೆ ದೂರು ನೀಡಲಾಯಿತು. ಜನಸ್ಪಂದನ ಸಭೆಯಲ್ಲಿ ಡಿವೈಎಸ್‌ಪಿ ರವಿಕುಮಾರ್, ಇನ್ಸ್ ಪೆಕ್ಟರ್ ಗಳಾದ ಗೋವಿಂದರಾಜು, ದೀಪಕ್, ಅಬಕಾರಿ ಇನ್ಸ್ ಪೆಕ್ಟರ್ ವೆಂಕಟೇಶ್, ಎಸ್‌ಐಗಳಾದ ಅಜಯ್, ರವಿಕುಮಾರ್ ಹಾಜರಿದ್ದರು.

# 28ರಿಂದ ಪೋಲಿಯೋ ಅಭಿಯಾನ



ಮೈಸೂರು: 5 ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿ ಎಂದು ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಪೂರ್ವಸಿದ್ಧತಾ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನವನ್ನು ಶೇಕಡಾ ನೂರರಷ್ಟು ಯಶಸ್ವಿಗೊಳಿಸಲು ಎಲ್ಲಾ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಜೂ.28ರ ಭಾನುವಾರದಂದು ಲಸಿಕಾ ಕೇಂದ್ರಗಳ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂನ್ 29 ರಿಂದ ಜುಲೈ 1 ರವರೆಗೆ ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಎಲ್ಲಾ ಪ್ರತಿಯೊಂದು ಮಗುವಿಗೂ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪೋಲಿಯೋ ಮುಕ್ತ ಸಮಾಜವನ್ನು ಉಳಿಸಿಕೊಳ್ಳಲು 5 ವರ್ಷದೊಳಗಿನ ಯಾವುದೇ ಒಂದು ಮಗುವೂ ಸಹ ಲಸಿಕೆಯಿಂದ ವಂಚಿತರಾಗಬಾರದು. ಅಭಿಯಾನದ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳಿಗೆ ಜವಾಬ್ದಾರಿ ವಹಿಸಲಾಗಿದೆ. 2026ನೇ ಸಾಲಿನ ರಾಷ್ಟ್ರೀಯ ಲಸಿಕಾ ದಿನದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಒಟ್ಟು 2,19,521 ಮಕ್ಕಳಿಗೆ ಲಸಿಕೆ ನೀಡುವ ಮಹತ್ತರ ಗುರಿಯನ್ನು ಹೊಂದಲಾಗಿದೆ. ಜಿಲ್ಲೆಯ ಒಟ್ಟು 7,78,059 ಮನೆಗಳನ್ನು ತಲುಪಲು ಆರೋಗ್ಯ ಇಲಾಖೆ ಸಜ್ಜಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿದರು. ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಪಲ್ಸ್ ಪೋಲಿಯೋ ಅನುಷ್ಠಾನ ಅಧಿಕಾರಿ ಡಾ.ಸಿರಾಜ್ ಅಹಮದ್ ಸೇರಿ ಇತರರು ಉಪಸ್ಥಿತರಿದ್ದರು

# ದಿವ್ಯ ಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಕ್ಷರಾಭ್ಯಾಸ

ಚಾಮರಾಜನಗರ, ತಾಲೂಕಿನ ಅಂಕನಶೆಟ್ಟಿಪುರ ಗ್ರಾಮದಲ್ಲಿರುವ ಪ್ರೇರಣಾ ವಿದ್ಯಾಸಂಸ್ಥೆಯ ಶಾಲೆಯ ಎಲ್‌ಕೆಜಿ ಮತ್ತು ಯುಕೆಜಿ ಮಕ್ಕಳಿಗೆ ಹರದನಹಳ್ಳಿ ದಿವ್ಯ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಸನ್ನಿಧಾನದಲ್ಲಿ ಅಕ್ಷರಾಭ್ಯಾಸಕ್ಕೆ ಗುರು ಹಿರಿಯರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು.

ಪ್ರೇರಣಾ ವಿದ್ಯಾಸಂಸ್ಥೆಗೆ ಎಲ್‌ಕೆಜಿ ಮತ್ತು ಯುಕೆಜಿಗೆ ದಾಖಲಾಗಿರುವ ಮಕ್ಕಳಿಗೆ ಪ್ರತಿ ವರ್ಷದಿಂದ ಈ ಬಾರಿಯು ಹರದನಹಳ್ಳಿಯಲ್ಲಿರುವ ಶ್ರೀ ದಿವ್ಯ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಅವರಣದಲ್ಲಿ ಸಂಸ್ಥೆಯ ವತಿಯಿಂದ ಅಕ್ಷರಾಭ್ಯಾಸಕ್ಕೆ ಮಕ್ಕಳೊಂದಿಗೆ ಪೋಷಕರು ಸಹ ಅಗಮಿಸಿ, ಪೂಜೆ ಸಲ್ಲಿಸಿ, ತಾಯಿ ಶಾರದಾಂಬೆ ಮತ್ತು ದಿವ್ಯ ಲಿಂಗೇಶ್ವರ ಸ್ವಾಮಿ ಮುಂದೆ ತಟ್ಟೆಯಲ್ಲಿ ಅಕ್ಕಿ ಹಾಕಿ ಹರಿಶಿನ ಕೊನೆ ಮೂಲಕ ಅಕ್ಷರವನ್ನು ಬರೆಸಿದರು.

ದೇವಸ್ಥಾನದ ಪ್ರಧಾನ ಅರ್ಚಕರಾದ ವೇಣುಗೋಪಾಲ್ ಅವರು ಪೂಜೆ ಸಲ್ಲಿಸಿ ಮಾತನಾಡಿ, ಪ್ರೇರಣಾ ವಿದ್ಯಾಸಂಸ್ಥೆಯ ಪ್ರತಿ ವರ್ಷವು ದೇವಸ್ಥಾನದ ಸನ್ನಿಧಿಯಲ್ಲಿ ಅಕರಭ್ಯಾಸ ಕಾರ್ಯಕ್ರಮವನ್ನು ಅಯೋಜನೆ ಮಾಡಿ, ಮಕ್ಕಳಲ್ಲಿ ಶ್ರದ್ದೆ ಭಕ್ತಿ ಹಾಗು ಏಕಾಗ್ರತೆಯನ್ನು ಹೇಳಿಕೊಡುತ್ತಿದ್ದಾರೆ. ತಾಯಿ ಶಾರದಾಂಬೆ ಸನ್ನಿಧಿಯಲ್ಲಿ ಅಕ್ಷರಾಭ್ಯಾಸ ಮಾಡಿದ ಮಕ್ಕಳು ಮುಂದಿನ ಭವಿಷ್ಯ ಉಜ್ವಲವಾಗಿರುತ್ತದೆ. ಅವರ ಕಲಿಕೆಯುವ ಉನ್ನತ ಮಟ್ಟದಲ್ಲಿರುತ್ತದೆ. ಶಾರದಾಂಬೆಯ ಕೃಪೆಯು ಎಲ್ಲಾ ಮಕ್ಕಳ ಮೇಲೆ ಇರಲಿ ಎಂದು ಶುಭ ಕೋರಿದರು. ಸಂಸ್ಥೆಯ ಕಾರ್ಯದರ್ಶಿ ವಕೀಲ ಶಿವಸ್ವಾಮಿ ಮಾತನಾಡಿ, ಪ್ರೇರಣಾ ವಿದ್ಯೆ ಸಂಸ್ಥೆಯು ಹರದನಹಳ್ಳಿ ಹೋಬಳಿ ವ್ಯಾಪ್ತಿ ಹಾಗು ತಾಳವಾಡಿಯ ಗಡಿಗೆ ಹೊಂದಿಕೊಂಡಂದಿರುವ ಗ್ರಾಮಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪ್ರಾರಂಭವಾಗಿದ್ದು, ಮಕ್ಕಳ ದಾಖಲಾತಿ ಸಂಖ್ಯೆಯು ಸಹ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತದೆ. ಎಲ್ಲವು ಭಗವಂತನ ಅರ್ಶೀವಾದ ಮತ್ತು ಶ್ರೀ ದಿವ್ಯ ಲಿಂಗೇಶ್ವರ ಸ್ವಾಮಿ, ಮತ್ತು ಶ್ರೀ ಶಾರದಾಂಬೆ ಕೃಪೆಯಾಗಿದೆ. ಪ್ರತಿ ವರ್ಷದಂತೆ ಈ ಬಾರಿಯು ಮಕ್ಕಳಿಗೆ ಸ್ವಾಮಿ ಸನ್ನಿಧಿಯಲ್ಲಿ ಅಕ್ಷರಭ್ಯಾಸ ಬಹಳ ಯಶಸ್ವಿಯಾಗಿ ನಡೆದಿದೆ. ಪೋಷಕರು ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ದಿಕ್ಕಿನಲ್ಲಿ ನಮ್ಮ ಸಂಸ್ಥೆ ಸದಾ ತಮ್ಮೊಂದಿಗೆ ಇರುತ್ತದೆ. ಮಕ್ಕಳ ವಿದ್ಯಾಭ್ಯಾಸ ಹೊಣೆ ನಮ್ಮದಾಗಿದೆ ಎಂದು ತಿಳಿಸಿದರು. ಪ್ರೇರಣಾ ವಿದ್ಯಾಸಂಸ್ಥೆಯ ಅಧ್ಯಕ್ಷ ಬಿ.ಪಿ. ಪ್ರಕಾಶ್, ಸಂಸ್ಥೆಯ ಟ್ರಸ್ಟಿ ನಟರಾಜನ್, ಶಾಲೆಯ ಮುಖ್ಯ ಶಿಕ್ಷಕ ಮಹೇಶ್‌ಕುಮಾರ್, ಎಚ್.ಜಿ. ಗ್ರಾಮದ ಗೌಡರಾದ ಕೆ. ಶಿವರಾಮು, ಸಹ ಶಿಕ್ಷಕರು ಹಾಜರಿದ್ದರು.



# ಸಾರ್ವಜನಿಕರಿಂದ 31 ದೂರುಗಳು ದಾಖಲು

## ಜಿಲ್ಲಾಧಿಕಾರಿ ಶ್ರೀರೂಪ ನೇತೃತ್ವದಲ್ಲಿ ನೇರ ಫೋನ್ ಇನ್ ಕಾರ್ಯಕ್ರಮ

ಚಾಮರಾಜನಗರ: ಸಾರ್ವಜನಿಕರ ಕುಂದು ಕೊರತೆಗಳನ್ನು ಅತ್ಯಂತ ವೇಗವಾಗಿ ಆಲಿಸಿ, ಸ್ಥಳದಲ್ಲೇ ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹಮ್ಮಿಕೊಂಡಿದ್ದ ನೇರ ಫೋನ್ ಇನ್ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ನೇತೃತ್ವದಲ್ಲಿ ನಡೆದ ಒಂದು ಗಂಟೆಯ ಈ ವಿಶೇಷ ನೇರ ಸಂವಾದದಲ್ಲಿ ಜಿಲ್ಲೆಯ ನಾನಾ ಭಾಗಗಳಿಂದ ಸತತವಾಗಿ ಕರೆಗಳು ಬಂದಿದ್ದು, ಒಟ್ಟು 31 ಪ್ರಮುಖ ದೂರುಗಳು ದಾಖಲಾಗಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಹಾಗೂ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ ಅವರ ಸಮ್ಮುಖದಲ್ಲಿ ಜನತೆ ತಮ್ಮ ಅಹವಾಲುಗಳನ್ನು ನೇರವಾಗಿ ಹಂಚಿಕೊಂಡರು.

### ಕೇಳಿಬಂದ ಪ್ರಮುಖ ಮೂಲಸೌಕರ್ಯ ಹಾಗೂ ಅಕ್ರಮಗಳ ದೂರುಗಳು

ಈ ದೂರವಾಣಿ ಸಂವಾದದಲ್ಲಿ ಜಿಲ್ಲೆಯಾದ್ಯಂತ ಇರುವ ಮೂಲಸೌಕರ್ಯ ಕೊರತೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರು ಆಕ್ರೋಶ ಹೊರಹಾಕಿದರು. ಕೊಳ್ಳೇಗಾಲ ಭಾಗದ ಕಾವೇರಿ ನದಿ ಪಾತ್ರದಲ್ಲಿ ಅವಿಶ್ರಾಂತವಾಗಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆ ಮತ್ತು ಜಿಲ್ಲೆಯ ವಿವಿಧೆಡೆ ರಾಜಾರೋಷವಾಗಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಂತೆ ದೂರುಗಳು ಬಂದವು. ನಗರ ಪ್ರದೇಶದ ಸಮಸ್ಯೆಗಳ ಪೈಕಿ ಚಾಮರಾಜನಗರ ಪಟ್ಟಣದ 15ನೇ ವಾರ್ಡಿನಲ್ಲಿ ನಗರೋತ್ಥಾನ ಯೋಜನೆಯಡಿ ಇನ್ನೂ ರಸ್ತೆ ನಿರ್ಮಾಣವಾಗದಿರುವುದು, ಗುಂಡ್ಲುಪೇಟೆ ರಸ್ತೆಯು ಕಿತ್ತುಹೋಗಿ ಸರಣಿ ಅಪಘಾತಗಳು ಸಂಭವಿಸುತ್ತಿರುವುದು ಹಾಗೂ ಸತ್ಯಮಂಗಲ ರಸ್ತೆಯಲ್ಲಿ ಒಳಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿರುವ ಬಗ್ಗೆ ನಿವಾಸಿಗಳು ಅಳಲು ತೋಡಿಕೊಂಡರು. ಜೊತೆಗೆ 19ನೇ ವಾರ್ಡಿನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವ ಬಗ್ಗೆಯೂ ದೂರಿದರು.

### ಜನರ ಮನೆ ಬಾಗಿಲಿಗೇ



### ಗ್ರಾಮೀಣ ಭಾಗದ ಸಮಸ್ಯೆಗಳು, ಆರೋಗ್ಯದ ಹಕ್ಕೊತ್ತಾಯ

ಗ್ರಾಮೀಣ ಪ್ರದೇಶಗಳಿಂದಲೂ ಗಂಭೀರ ಸ್ವರೂಪದ ಅಹವಾಲುಗಳು ಸಲ್ಲಿಕೆಯಾದವು. ಯಳಂದೂರು ತಾಲೂಕಿನ ಕೆಸ್ತೂರಿನಲ್ಲಿ ಮಳೆಗಾಲದಲ್ಲಿ ಚರಂಡಿ ನೀರು ತುಂಬಿ ಮಾರಮ್ಮನ ದೇವಾಲಯದ ಬಳಿ ಶೇಖರಣೆಯಾಗುತ್ತಿರುವ ಬಗ್ಗೆ ಹಾಗೂ ಕರಿನಂಜನಪುರದಲ್ಲಿ ಸ್ಮಶಾನಕ್ಕೆ ಅಳವಡಿಸಲಾದ ಗೇಟ್ ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ ಗ್ರಾಮಸ್ಥರು ದೂರಿದರು. ಹನೂರು ತಾಲೂಕಿನ ಸಪ್ಪಯ್ಯನಪುರದಲ್ಲಿ ಸ್ಮಶಾನ ಜಾಗಕ್ಕಾಗಿ ಸಲ್ಲಿಸಲಾದ ಅರ್ಜಿ ಸುದೀರ್ಘ ಕಾಲದಿಂದ ಇತ್ಯರ್ಥವಾಗದಿರುವ ಬಗ್ಗೆ ದೂರು ಬಂದಿದ್ದರೆ, ಬಂಡಳ್ಳಿ ಆಸ್ಪತ್ರೆಗೆ ಖಾಯಂ ವೈದ್ಯರನ್ನು ನೇಮಕ ಮಾಡುವಂತೆ ಸ್ಥಳೀಯರು ಒತ್ತಾಯಿಸಿದರು. ಇನ್ನು ಅರಕಲವಾಡಿ, ಯಣಗುಂಬ ಮತ್ತು ಬೇಗೂರಿನಲ್ಲಿ ಸರಿಯಾದ ಬಸ್ ವ್ಯವಸ್ಥೆ ಹಾಗೂ ನಿಲುಗಡೆ ಇಲ್ಲದಿರುವ ಬಗ್ಗೆ ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು. ಇವುಗಳೊಂದಿಗೆ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ನಡೆದಿದೆ ಎನ್ನಲಾದ ಅಕ್ರಮಗಳ ದೂರುಗಳು ಇತ್ಯರ್ಥವಾಗದಿರುವುದು, ಮಾಂಬಳ್ಳಿ ಸರ್ಕಾರಿ ರೇಷ್ಮೆ ಫಿಲೇಚರ್ ಪುನಶ್ಚೇತನ ಮತ್ತು ಖಾತೆ ಮಾಡಿಕೊಡದಿರುವ ಬಗ್ಗೆ ವೈಯಕ್ತಿಕ ಅಹವಾಲುಗಳು ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದವು.

### ಹೋಗಿ ಸಮಸ್ಯೆ ಬಗೆಹರಿಸಿ

ಫೋನ್ ಇನ್ ಕಾರ್ಯಕ್ರಮ ಮುಗಿದ ತಕ್ಷಣವೇ ಅಧಿಕಾರಿಗಳ ಮಹತ್ವದ ಸಭೆ ನಡೆಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಸಾರ್ವಜನಿಕರಿಂದ ಬಂದ ಕರೆಗಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸದೆ ಗಂಭೀರವಾಗಿ ಪರಿಗಣಿಸಬೇಕು ಎಂದು ಆದೇಶಿಸಿದರು. ಅಧಿಕಾರಿಗಳು ಕಚೇರಿಯಲ್ಲೇ ಕೂರದೆ ಸಮಸ್ಯೆ ಇರುವ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಬೇಕು. ಅಷ್ಟೇ ಅಲ್ಲದೆ, ಕರೆ ಮಾಡಿದ ಸಾರ್ವಜನಿಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಅಗತ್ಯವಿದ್ದರೆ ಅವರ ಮನೆ ಬಾಗಿಲಿಗೇ ತೆರಳಿ ಕುಂದು ಕೊರತೆಗಳನ್ನು ಸಂಪೂರ್ಣವಾಗಿ ಇತ್ಯರ್ಥಪಡಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

### ಸ್ಥಳದಲ್ಲೇ ತಕ್ಷಣದ ಕ್ರಮಕ್ಕೆ ಜಿಲ್ಲಾಧಿಕಾರಿಗಳ ಕಡಕ್ ಸೂಚನೆ

ಸಾರ್ವಜನಿಕರ ಪ್ರತಿಯೊಂದು ದೂರನ್ನು ಅತ್ಯಂತ ತಾಳ್ಮೆಯಿಂದ ಆಲಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಸ್ಥಳದಲ್ಲೇ ಹಾಜರಿದ್ದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ತಕ್ಷಣವೇ ಆಯಾ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಸಮಸ್ಯೆ ಇತ್ಯರ್ಥಪಡಿಸುವಂತೆ ಕಡಕ್ ಸೂಚನೆ ನೀಡಿದರು. ಕರೆ ಮಾಡಿದ ಸಾರ್ವಜನಿಕರ ದೂರವಾಣಿ ಸಂಖ್ಯೆಗಳನ್ನು ಪಡೆದುಕೊಂಡ ಅವರು, ನಿಮ್ಮ ಸಮಸ್ಯೆಗಳಿಗೆ ಅಧಿಕಾರಿಗಳು ಖಂಡಿತವಾಗಿ ಸ್ಪಂದಿಸಲಿದ್ದಾರೆ ಎಂಬ ಭರವಸೆ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ಅವರು ತಮ್ಮ ಇಲಾಖೆಗೆ ಸಂಬಂಧಿಸಿದ ಅಕ್ರಮ ಮದ್ಯ ಹಾಗೂ ಮರಳುಗಾರಿಕೆ ದೂರುಗಳನ್ನು ಆಲಿಸಿ, ಈ ಬಗ್ಗೆ ತಕ್ಷಣ ಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಶ್ರೀರೂಪ ಅವರಿಂದ

# ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆ



ಚಾಮರಾಜನಗರ, ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂದು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ನೀಡುವ 10 ಸಾವಿರ ರೂ. ಗಳ ವಿದ್ಯಾರ್ಥಿವೇತನ ವಿತರಿಸಿದರು.

ನಗರದ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿಂದು ಚಾಮರಾಜನಗರದಲ್ಲಿ ಶಾಖಾ ಕಚೇರಿ ಹೊಂದಿರುವ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯಲ್ಲಿ ಸದಸ್ಯರಾಗಿರುವ ತಲಾ 8 ಪೋಷಕರ ಮಕ್ಕಳಿಗೆ ಮುಂದಿನ ಶೈಕ್ಷಣ ಕ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಸಲುವಾಗಿ ನೀಡಲಾಗುವ ವಿದ್ಯಾರ್ಥಿವೇತನ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು. ಇದೇ ವೇಳೆ ಜಿಲ್ಲಾಧಿಕಾರಿ ಶ್ರೀರೂಪ ಅವರು ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಮಾತನಾಡಿ ಮುಂದಿನ ಹಂತದ ಶೈಕ್ಷಣ ಕ ವಿದ್ಯಾಭ್ಯಾಸದ ಬಗ್ಗೆ ಮಕ್ಕಳನ್ನು ವಿಚಾರಿಸಿದರು. ಭವಿಷ್ಯದಲ್ಲಿ ಏನು ಆಗಬೇಕೆಂಬ ಉದ್ದೇಶ ಹಾಗೂ ಗುರಿಗಳನ್ನು ಹೊಂದಿದ್ದೀರಿ ಎಂದು ಮಕ್ಕಳನ್ನು ಕೇಳಿದರು. ಇದಕ್ಕುತ್ತರಿಸಿದ ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆಯಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದರು. ಬಳಿಕ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ಸಂಸ್ಥೆಯಲ್ಲಿ ಸದಸ್ಯರಾಗಿರುವ ಪೋಷಕರ ಮಕ್ಕಳನ್ನು ಶೈಕ್ಷಣ ಕವಾಗಿ ಉತ್ತೇಜಿಸುವ ಸಲುವಾಗಿ ಕಳೆದ ಮೂರು ವರ್ಷಗಳಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದರು.

ಮುಂದಿನ ದಿನಗಳಲ್ಲಿ ಪಿಯುಸಿ ಪರೀಕ್ಷೆಯಲ್ಲಿಯೂ ಹೆಚ್ಚಿನ ಅಂಕ ಪಡೆದ ಮಕ್ಕಳಿಗೂ ವಿದ್ಯಾರ್ಥಿವೇತನ ನೀಡಲು ನಗರದ ಗ್ರಾಮೀಣ ಕೂಟ ಸಂಸ್ಥೆ ಇಚ್ಚಿಸಿದೆ. ವಿದ್ಯಾರ್ಥಿವೇತನವನ್ನು ಶೈಕ್ಷಣ ಕ ಉದ್ದೇಶಗಳಿಗಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಮಕ್ಕಳು ಉನ್ನತ ವ್ಯಾಸಂಗ ಪಡೆದು ಉತ್ತಮ ಜೀವನ ಕಟ್ಟಿಕೊಳ್ಳಬೇಕು. ಆ ಮೂಲಕ ಮಕ್ಕಳು ತಂದೆತಾಯಿಗಳಿಗೆ ಹಾಗೂ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಜಿಲ್ಲಾಧಿಕಾರಿ ಶೀರೂಪ ಕಿವಿಮಾತು ಹೇಳಿದರು. ಅಪೂರ್ವ (ಶೇ. 98.56), ಸಿಂಚನಾ (ಶೇ. 94.88), ತೇಜಸ್ವಿನಿ (ಶೇ. 94.24), ಅರ್ಪಿತಾ (ಶೇ. 94), ಮಾನಸ (ಶೇ. 93.44), ಇಂದುಶ್ರೀ (ಶೇ. 91), ಆಶಾ (ಶೇ. 90.56) ಹಾಗೂ ಹೇಮಲತಾ (ಶೇ. 89.28) ಅವರು ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.


ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಶಿರಸ್ತೇದಾರರಾದ ರಂಗರಾಜು, ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯ ವಲಯ ವ್ಯವಸ್ಥಾಪಕರಾದ ಕೃಷ್ಣ, ಲೋಕೇಶ್, ಶಾಖಾ ವ್ಯವಸ್ಥಾಪಕರಾದ ದಿಲೀಪ್‌ಕುಮಾರ್, ವಿದ್ಯಾರ್ಥಿಗಳ ಪೋಷಕರು, ಇತರರು ಇದೇ ಸಂದರ್ಭದಲ್ಲಿ ಇದ್ದರು. ಇದಕ್ಕೂ ಮೊದಲು ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯ ವತಿಯಿಂದ ಜಿಲ್ಲಾಡಳಿತ ಭವನ ಆವರಣದಲ್ಲಿ ಗಿಡನೆಟ್ಟು ನಿರೇರೆಯಲಾಯಿತು.

## ಒಂದು ದಿನದ ಕಾರ್ಯಾಗಾರ

ಮೈಸೂರು: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜವಳಿ ರಫ್ತುದಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಜುಲೈ 3ರಂದು ಬೆ.10ಗಂಟೆಗೆ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿ ಪ್ರಾಂಗಣದಲ್ಲಿರುವ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿರುತ್ತದೆ.

ಸದರಿ ಕಾರ್ಯಾಗಾರಕ್ಕೆ ರಫ್ತು ಉದ್ಯಮದಲ್ಲಿ ಆಸಕ್ತಿ ಹೊಂದಿರುವ ಉದ್ದಿಮೆದಾರರು ಕಾರ್ಯಾಗಾರದಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕ ತಿಳಿಸಿದ್ದಾರೆ.

# ಚಾ.ನಗರ: ಕಾಡಾನೆ ಕಳೆಬರ ಪತ್ತೆ



ಚಾಮರಾಜನಗರ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವನ್ಯಜೀವಿ ವಲಯ ವ್ಯಾಪ್ತಿಯ ಕಾರೆಪಾಳ್ಯ ಗಸ್ತಿನ ಸಮೀಪ ಅರಣ್ಯ ಪ್ರದೇಶದಿಂದ ಸುಮಾರು 50 ಮೀಟರ್ ದೂರದಲ್ಲಿರುವ ಕಾಫಿ ತೋಟದಲ್ಲಿ ಒಂದು ಕಾಡಾನೆ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮೃತ ಆನೆಯು ಸುಮಾರು 25 ವರ್ಷ ವಯಸ್ಸಿನ (ಮಕಣ) ಗಂಡಾನೆಯಾಗಿದ್ದು, ಮೇಲ್ನೋಟಕ್ಕೆ ಇತರೆ ಆನೆಗಳೊಂದಿಗಿನ ಕಾದಾಟದಿಂದ ಗಾಯಗೊಂಡು ಮೃತಪಟ್ಟಿರಬಹುದೆಂದು ಕಂಡುಬಂದಿದೆ. ಘಟನೆಯ ಮಾಹಿತಿ ದೊರೆತ ತಕ್ಷಣ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಆರ್‌ಟಿ ವಿಭಾಗ.ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಹೆಚ್ಚಿನ ಪರಿಶೀಲನೆಗಾಗಿ ಮೃತ ಆನೆಯ ಅಂಗಾಂಗ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಬಿ.ಆರ್.ಟಿ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಗಮಾರ್ಷಲ್‌ಗೆ ಸಮಗ್ರ ಪ್ರಶಸ್ತಿ




ಚಾಮರಾಜನಗರ, ಗೊಜುಕಾನ್ ಕರಾಟೆ ಡು ಅಸೋಸಿಯೇಷನ್ ವತಿಯಿಂದ ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ

ನಗರದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆಪಟುಗಳು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿ ಉತ್ತಮ ಪ್ರದರ್ಶನ ನೀಡಿ ವಿಜೇತರಾಗಿ ಬಹುಮಾನಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಚಾಮರಾಜನಗರದ ನಾಗ ಮಾರ್ಷಲ್ ಆರ್ಟ್ಸ್ ಅಕಾಡಮಿ ಕರಾಟೆ ಪಟುಗಳು ಕತಾ ವಿಭಾಗದಲ್ಲಿ ವಿಜಯ್. ಜ್ಞಾನೇಶ್ ಕುಮಾರ್. ಹರ್ಷವರ್ಧನ್ ಪ್ರಥಮ ಸ್ಥಾನ, ಹೇಮಂತ್. ಪವನ್. ಮನ್ವಿತ್ ದ್ವಿತೀಯ ಸ್ಥಾನ, ಮಂಜುನಾಥ್. ನವನೀತ್. ವಿವೇಕ್ ತೃತೀಯ ಸ್ಥಾನ ಪಡೆದು. ವಿಜೇತರಾಗಿ ಜಿಲ್ಲೆ ಗೆ ಕೀರ್ತಿ ತಂದಿದ್ದಾರೆ. ಅವರನ್ನು ಮುಖ್ಯ ತರಬೇತುದಾರರು, ವಕೀಲರಾದ ಸೆನ್ಸಾಯ್ ರಾಜೇಂದ್ರ, ತರಬೇತುದಾರ ಸೆನ್ಸಾಯ್ ಯೋಗೇಶ್.ಸೆನ್ಸಾಯ್ ರಮೇಶ್. ಸೆನ್ಸಾಯ್ ಶೇಖರ್ ಅಭಿನಂದಿಸಿದ್ದಾರೆ.

ಶಾಲಾ ವಿದ್ಯಾರ್ಥಿಗಳಿಗೆ ಸಾಮಗ್ರಿ ವಿತರಣೆ

# ಸರ್ಕಾರದ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಿ: ಕ್ಷೇತ್ರ ಶಿಕ್ಷಣಾಧಿಕಾರಿ ಪ್ರತಿಭಾ

ಹನೂರು: ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಹಲವು ಸೌಲಭ್ಯವನ್ನು ನೀಡಲಾಗುತ್ತಿದೆ. ಜೊತೆಗೆ ದಾನಿಗಳು ನೀಡುವ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರತಿಭಾ ತಿಳಿಸಿದರು.

ಹನೂರು ತಾಲೂಕಿನ ನಾಗನತ್ತ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಮ್ ಫೀನ್ ಕಂಪನಿಯ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸಾಮಗ್ರಿ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಮಧ್ಯಾಹ್ನದ ಬಿಸಿಯೂಟ, ವಾರದಲ್ಲಿ ಆರು ದಿನ ಪೌಷ್ಟಿಕ ಆಹಾರ, ಹಾಲು, ಸಮವಸ್ತ್ರ, ಶೂ, ಪಠ್ಯಪುಸ್ತಕ, ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳನ್ನು ನೀಡಲಾಗುತ್ತಿದೆ ಇವುಗಳನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಪಡೆದುಕೊಳ್ಳುವುದರ ಮೂಲಕ ಪೋಷಕರಿಗೆ ಹಾಗೂ ಶಾಲೆಗೆ ಕೀರ್ತಿ ತರುವಂತಾಗಬೇಕು ಎಂದರು.



ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹನೂರು ಶೈಕ್ಷಣಿಕ ವಲಯವು ಎಸೆಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆಯುವ ನಿಟ್ಟಿನಲ್ಲಿ ಈಗಿನಿಂದಲೇ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ವಿಷಯವಾರು ಶಿಕ್ಷಕರುಗಳು ಪಾಠ ಪ್ರವಚನ ಮಾಡುತ್ತಿದ್ದಾರೆ. ಶಾಸಕರಾದ ಎಂ ಆರ್ ಮಂಜುನಾಥ್ ರವರು ಸಹ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹದಿಂದ ಸರ್ಕಾರಿ ಶಾಲೆಗಳಿಗೆ ದಾಖಲಾತಿ ಮಾಡುವುದನ್ನು ಕಡಿಮೆ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲೂ ಇಂಗ್ಲಿಷ್ ಮಾಧ್ಯಮ ಪ್ರಾರಂಭ ಮಾಡಿರುವುದರಿಂದ ಪೋಷಕರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಹೆಚ್ಚು ಹೆಚ್ಚು ದಾಖಲಾತಿ ಮಾಡಬೇಕು ಎಂದು ಮನವಿ ಮಾಡಿದರು.ಆಮ್ ಫೀನ್ ಕಂಪನಿಯ ವ್ಯವಸ್ಥಾಪಕ ಲಕ್ಷ್ಮಣ್ ಕುಮಾರ್ ಮಾತನಾಡಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಹಲವು ಯೋಜನೆಗಳನ್ನು ನೀಡುತ್ತಾ ಬಂದಿದೆ ಆದರೂ ನಾವು ಸಹ ಸರ್ಕಾರಿ ಶಾಲಾ ಮಕ್ಕಳಿಗೆ ಅನುಕೂಲ ತಲುಪಿಸಬೇಕು ಎಂಬ ನಿಟ್ಟಿನಲ್ಲಿ ಪ್ರತಿವರ್ಷವು ಹನೂರು ಶೈಕ್ಷಣಿಕ ವಲಯದ ಶಾಲೆಗಳಿಗೆ ಹಲವು ಸಾಮಗ್ರಿಗಳನ್ನು ಮಾಡುತ್ತಿದ್ದೇವೆ. ಅದೇ ರೀತಿ ನಾಗನತ್ತ, ನಂಜೇಒಡೆಯರ ದೊಡ್ಡಿ ಬೈರನತ್ತ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳಿಗೆ ಅತ್ಯುತ್ತಮ ಗುಣಮಟ್ಟದ ಶಾಲಾ ಬ್ಯಾಗ್ ಊಟದ ಬ್ಯಾಗ್, ಟ್ರ್ಯಾಕ್ ಶೂಟ್ , ಟೇಬಲ್, ಡೆಸ್ಕ್, ಫ್ಯಾನ್, ಅಲ್ಮೆರಾ, ವಾಟರ್ ಬಾಟಲ್ ರಾಕ್ಸ್ ರೌಂಡ್ ಟೇಬಲ್ ಸೇರಿದಂತೆ ಹಲವು ಸಾಮಗ್ರಿಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದರು. ಇದೆ ವೇಳೆ ಕಂಪನಿಯ ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರನ್ನು ಶಾಲಾ ಎಸ್ ಡಿ ಎಂ ಸಿ ಅಧ್ಯಕ್ಷರು ಹಾಗೂ ಸದಸ್ಯರು ಸನ್ಮಾನಿಸಿದರು. ಆಮ್ ಫೀನ್ ಸೋಲಾರ್ ಕಂಪನಿಯ ಹಿರಿಯ ವ್ಯವಸ್ಥಾಪಕ ಸುರೇಶ್ ಖೇತಾವತ್, ಸಹಾಯಕ ವ್ಯವಸ್ಥಾಪಕ ಲೀಲಾ ಪ್ರಸಾದ್, ಅಭಿಯಂತರರಾದ ಕಾರ್ತಿಕ್, ಅಶ್ವಿನ್ ವಶಿಷ್ಠ, ಇಸಿಓಗಳಾದ ಅಶೋಕ್ ನಾಯ್ಡು, ಚಿನ್ನಪ್ಪಯ್ಯ, ಬಂಡಳ್ಳಿ ಕ್ಲಸ್ಟರ್ ನ ಸಿ ಆರ್ ಪಿ ದೊಡ್ಡ ಸಿದ್ದಶೆಟ್ಟಿ, ಮುಖ್ಯ ಶಿಕ್ಷಕಿ ಪೂರ್ಣಿಮಾ ಸಹ ಶಿಕ್ಷಕಿಯವರಾದ ಜ್ಯೋತಿ ಲಕ್ಷ್ಮಿ ವಿದ್ಯಾ, ಎಸ್ ಡಿ ಎಂ ಸಿ ಅಧ್ಯಕ್ಷ ಮಲ್ಲು, ಸದಸ್ಯರು ಶಾಲೆಯ ಹಳೆಯ ವಿದ್ಯಾರ್ಥಿಗಳು, ಗ್ರಾಮಸ್ಥರು ಅಂಗನವಾಡಿ ಆಶಾ ಕಾರ್ಯಕರ್ತರು ಹಾಜರಿದ್ದರು.

## ಜೂ.28 ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಹನಿ ಹಾಕಿಸಿ: ಡೀಸಿ ಜಿ.ಪ್ರಭು

# 1,23,545 ಮಕ್ಕಳಿಗೆ ಪೋಲಿಯೊ ಹನಿ ಗುರಿ

**ಚಿಕ್ಕಬಳ್ಳಾಪುರ:** ಪೋಲಿಯೊವು ಮಕ್ಕಳಲ್ಲಿ ಶಾಶ್ವತ ಅಂಗವೈಕಲ್ಯ ಉಂಟುಮಾಡುವ ಅಪಾಯಕಾರಿ ಸಾಂಕ್ರಾಮಿಕ ರೋಗವಾಗಿದ್ದು, ಸಮಯಕ್ಕೆ ಸರಿಯಾಗಿ ಪೋಲಿಯೊ ಲಸಿಕೆಯನ್ನು ನೀಡುವ ಮೂಲಕ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಬಹುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಹೇಳಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂಬಂಧಪಟ್ಟ ಇತರೆ ಇಲಾಖೆಗಳು ಸಮನ್ವಯ ಸಾಧಿಸಿ ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಜಿಲ್ಲೆಯ ಯಾವುದೇ ಮಗು ಪೋಲಿಯೊ ಲಸಿಕೆಯಿಂದ ವಂಚಿತವಾಗದಂತೆ ಎಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಭಾರತ ಸರ್ಕಾರವು ಜೂ.28ರಂದು ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೊ ಭಾನುವಾರ) ಆಚರಿಸಲು ತೀರ್ಮಾನಿಸಿದ್ದು, ಅಂದು ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ 0 ರಿಂದ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಬೆಳಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಪೋಲಿಯೊ ಬೂತ್‌ಗಳಲ್ಲಿ ಎರಡು ಹನಿ ಪೋಲಿಯೊ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈ ಕಾರ್ಯಕ್ರಮಕ್ಕಾಗಿ ಒಟ್ಟು 647 ಲಸಿಕಾ ಕೇಂದ್ರಗಳನ್ನು ತೆರೆಯಲಾಗಿದ್ದು, 2,668 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಸುಮಾರು 1,23,545 ಮಕ್ಕಳಿಗೆ ಪೋಲಿಯೊ ಹನಿ ನೀಡುವ ಗುರಿ ಹೊಂದಲಾಗಿದೆ. ಕಾರ್ಯಕ್ರಮದ ಸುಸೂತ್ರ ಅನುಷ್ಠಾನ ಹಾಗೂ ಮೇಲ್ವಿಚಾರಣೆಗಾಗಿ 141 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ ಎಂದರು.

ಪೋಲಿಯೊ ಬೂತ್‌ಗಳಿಗೆ ಮಕ್ಕಳನ್ನು ಕರೆತರಲು ಸಾಧ್ಯವಾಗದ ಕುಟುಂಬಗಳಿಗಾಗಿ ಬೂತ್ ದಿನದ ನಂತರ ಗ್ರಾಮೀಣ ಪ್ರದೇಶಗಳಲ್ಲಿ ಎರಡು ದಿನ ಹಾಗೂ ನಗರ ಪ್ರದೇಶಗಳಲ್ಲಿ ಮೂರು ದಿನ ಮನೆ–ಮನೆಗೆ ಭೇಟಿ ನೀಡಿ ಲಸಿಕೆ ನೀಡಲಾಗುವುದು. ಜೂನ್ 29ರಿಂದ ಜುಲೈ 1ರವರೆಗೆ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಿಬ್ಬಂದಿ ಮನೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಪೋಲಿಯೊ ಹನಿ ನೀಡಿರುವುದನ್ನು ಖಚಿತಪಡಿಸಿಕೊಳ್ಳಲಿದ್ದಾರೆ ಎಂದು ಹೇಳಿದರು.

ಸಾರ್ವಜನಿಕರು ತಮ್ಮ ಸಮೀಪದ ಅಂಗನವಾಡಿ, ಆಶಾ ಕಾರ್ಯಕರ್ತೆಯರು ಅಥವಾ ಆರೋಗ್ಯ ಸಿಬ್ಬಂದಿಯನ್ನು ಸಂಪರ್ಕಿಸಿ ಸಮೀಪದ ಪೋಲಿಯೊ ಬೂತ್‌ಗಳ ಮಾಹಿತಿಯನ್ನು ಪಡೆಯಬಹುದು. ಪ್ರಯಾಣದಲ್ಲಿರುವ ಹಾಗೂ ವಲಸೆ ಕುಟುಂಬಗಳ ಮಕ್ಕಳಿಗೂ ಲಸಿಕೆ ತಲುಪುವಂತೆ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ 36 ಟ್ರಾನ್ಸಿಟ್ ಬೂತ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಹಿಂದೆ ಎಷ್ಟೇ ಬಾರಿ ಪೋಲಿಯೊ ಹನಿ ನೀಡಿದ್ದರೂ ಜೂನ್ 28ರಂದು ಮತ್ತೊಮ್ಮೆ ಎರಡು ಹನಿ ಪೋಲಿಯೊ ಲಸಿಕೆ ನೀಡುವುದು ಅತ್ಯಗತ್ಯ. ಪ್ರತಿಯೊಂದು ಸುತ್ತಿನ ಲಸಿಕಾಕರಣವು ಮಗುವಿನ ರೋಗನಿರೋಧಕ ಶಕ್ತಿಯನ್ನು ಮತ್ತಷ್ಟು ಬಲಪಡಿಸುವುದರಿಂದ ಯಾವುದೇ ಮಗುವನ್ನು ಈ ಅವಕಾಶದಿಂದ ವಂಚಿಸಬಾರದು ಎಂದು ಜಿಲ್ಲಾಧಿಕಾರಿ ಮನವಿ ಮಾಡಿದರು. ಪ್ರತಿ ಬಾರಿ ಎರಡು ಹನಿಗಳು ಪೋಲಿಯೊ ವಿರುದ್ಧ ನಿರಂತರ ಗೆಲುವು ಹಾಗೂ ಪೋಲಿಯೊ ಕೊನೆಗಾಣಿಸಿ, ಪೋಲಿಯೊ ರಹಿತ ವಿಶ್ವದ ಕನಸು ನನಸಾಗಿಸಿ ಎಂಬ ಘೋಷವಾಕ್ಯಗಳೊಂದಿಗೆ ನಡೆಯುತ್ತಿರುವ ಈ ಅಭಿಯಾನಕ್ಕೆ ಜಿಲ್ಲೆಯ ಸಾರ್ವಜನಿಕರು ಕೈಜೋಡಿಸಿ, 0–5 ವರ್ಷದ ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಹನಿ ಹಾಕಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಕರೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಹೇಶ್ ಕುಮಾರ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರೂ.3.5 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

**ತಿಪಟೂರು:** ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸುಮಾರು ರೂ3.5 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಷಡಕ್ಷರಿ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.



ತಾಲೂಕಿನ ನೊಣವಿನಕೆರೆ ಹೋಬಳಿಯ ಹುಣಸೆಘಟ್ಟ, ಗಂಗನಘಟ್ಟ ಹಾಗೂ ಗುಂಗರಮಳೆ ಗ್ರಾಮಗಳಲ್ಲಿ ಕೆಆರ್‌ಐಡಿಎಲ್ ವತಿಯಿಂದ ಆಯುಷ್ಮಾನ್ ಆರೋಗ್ಯ ಕೇಂದ್ರಗಳ ನಿರ್ಮಾಣ ಕಾಮಗಾರಿಗಳಿಗೆ ಹಾಗೂ ಹೊಸಹಳ್ಳಿ, ಎಸ್‌ಸಿ ಕಾಲೋನಿ, ಕಲ್ಲೇಶ್ವರನಗರ ಎಸ್‌ಸಿ ಕಾಲೋನಿ, ಬಿದರೆಕೆರೆ ಎಸ್‌ಸಿ ಕಾಲೋನಿ ಮತ್ತು ಮಾಕನಹಳ್ಳಿ ಎಸ್‌ಸಿ ಕಾಲೋನಿಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಗುಂಗರಮಳೆ ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಕೆ.ಷಡಕ್ಷರಿ, ತಿಪಟೂರು ತಾಲೂಕನ್ನು ಮಾದರಿ ತಾಲೂಕಾಗಿ ರೂಪಿಸುವ ಸಂಕಲ್ಪ ಹೊಂದಿದ್ದೇವೆ. ಟೀಕೆಗಳು ಕಳೆಯುತ್ತವೆ, ಆದರೆ ಅಭಿವೃದ್ಧಿ ಮಾತ್ರ ಉಳಿಯುತ್ತದೆ. ನಾನು ಮೊದಲ ಬಾರಿ ಶಾಸಕರಾದಾಗ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದೆ. ಈ ಬಾರಿ ಶಿಕ್ಷಣ, ಆರೋಗ್ಯ ಮತ್ತು ನೀರಾವರಿ ಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದ್ದೇನೆ ಎಂದು ಹೇಳಿದರು.

ತಾಲೂಕಿನ ಅಗತ್ಯವಿರುವ ಪ್ರದೇಶಗಳಲ್ಲಿ ಆಯುಷ್ಮಾನ್ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದ್ದು, ಗುಂಗರಮಳೆ, ಗಂಗನಘಟ್ಟ ಹಾಗೂ ಹುಣಸೆಘಟ್ಟ ಗ್ರಾಮಗಳಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ಶೀಘ್ರವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಮುಂದುವರಿದು ಮಾತನಾಡಿದ ಅವರು, ತಾಲೂಕಿನ ಕಿಬ್ಬನಹಳ್ಳಿ ಸಮೀಪ 300 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ವಿದ್ಯುತ್ ಲೈನ್ ಆಧುನೀಕರಣಕ್ಕೂ ಯೋಜನೆ ಮಂಜೂರಾಗಿದ್ದು, ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಲಾಗಿದೆ. ತಾಲೂಕಿಗೆ ಹೊಸದಾಗಿ 10 ಕೆಪಿಎಸ್ ಶಾಲೆಗಳು ಮಂಜೂರಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಆಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ತಾಲೂಕು ಪಂಚಾಯಿತಿ ಅಧ್ಯಕ್ಷ ನಾಕೇನಹಳ್ಳಿ ಸುರೇಶ್, ಮಲ್ಲೇನಹಳ್ಳಿ ಕಾಂತರಾಜು, ಶಿವಸ್ವಾಮಿ, ಹೇಮಂತ್‌ಕುಮಾರ್, ಕಿರಣ್ ಕುಮಾರ್, ಹೊಸಹಳ್ಳಿ ಬಸವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿ, ಶಾಲಾ ಬ್ಯಾಗ್ ವಿತರಣೆ

**ಚಿಕ್ಕಬಳ್ಳಾಪುರ:** ತಾಲೂಕಿನ ತಿಪ್ಪೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಕಣಜೇನಹಳ್ಳಿ ಯುವ ಮುಖಂಡ ಸುಹಾಸ್ ಅವರ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಉಚಿತ ಕಲಿಕಾ ಸಾಮಗ್ರಿ ಹಾಗೂ ಶಾಲಾ ಬ್ಯಾಗ್ ವಿತರಣಾ ಕಾರ್ಯಕ್ರಮವನ್ನು ಬುಧವಾರ ಕಣಜೇನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಯಿತು.




ಕಾರ್ಯಕ್ರಮಕ್ಕೆ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ ಹಾಗೂ ಸುಹಾಸ್ ಅವರ ತಂದೆ ಶ್ರೀರಾಮಣ್ಣ ಚಾಲನೆ ನೀಡಿ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿದರು.


ಈ ಸಂದರ್ಭದಲ್ಲಿ ಮಾತನಾಡಿದ ಶ್ರೀರಾಮಣ್ಣ, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ನಾವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದವರು. ಸರ್ಕಾರಿ ಶಾಲೆಗಳಲ್ಲಿ ಓದಿದ ಅನೇಕ ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಿದ್ದರೂ ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಲು ಹಿಂದೇಟು ಹಾಕುತ್ತಿರುವುದು ಬೇಸರದ ಸಂಗತಿ ಎಂದರು. ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಾಗಲಿ ಎಂಬ ಆಶಯ ವ್ಯಕ್ತಪಡಿಸಿದ ಅವರು, ತಿಪ್ಪೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ತಮ್ಮ ಕುಟುಂಬವು ಪ್ರತಿವರ್ಷ ಕಲಿಕಾ ಸಾಮಗ್ರಿ ವಿತರಿಸುತ್ತಿದೆ ಎಂದು ತಿಳಿಸಿದರು.

ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ ಮಾತನಾಡಿ, ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸುಹಾಸ್ ಅವರು ಪ್ರತಿವರ್ಷ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಕಲಿಕಾ ಸಾಮಗ್ರಿ ವಿತರಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಕೆಲವು ಮೂಲಸೌಕರ್ಯಗಳ ಕೊರತೆಯಿಂದ ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದಾರೆ. ಆದರೆ ಸರ್ಕಾರಿ ಶಾಲೆಗಳು ಯಾವುದೇ ರೀತಿಯಲ್ಲಿ ಖಾಸಗಿ ಶಾಲೆಗಳಿಗಿಂತ ಕಡಿಮೆಯಿಲ್ಲ. ಇಲ್ಲಿ ಉತ್ತಮ ಶಿಕ್ಷಕರು ಹಾಗೂ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಸರ್ಕಾರಿ ಶಾಲೆಗಳ ಕಟ್ಟಡ, ಶಾಲಾ ವಾತಾವರಣ ಹಾಗೂ ಅಗತ್ಯ ಸೌಲಭ್ಯಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರೆ ದಾಖಲಾತಿ ಪ್ರಮಾಣ ಹೆಚ್ಚಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

# ರಾಮನಗರ ಜಿಲ್ಲೆಯಲ್ಲಿ 75,581 ಮಕ್ಕಳಿಗೆ ಲಸಿಕೆ ಗುರಿ

**ರಾಮನಗರ:** 2026ರ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನವನ್ನು ದೇಶಾದ್ಯಂತ ಜೂನ್ 28ರಿಂದ ಜುಲೈ 1ರವರೆಗೆ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯಲ್ಲಿ 0 ರಿಂದ 5 ವರ್ಷದೊಳಗಿನ 75,581 ಮಕ್ಕಳಿಗೆ ಪೋಲಿಯೊ ಹನಿ ನೀಡುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ತಿಳಿಸಿದ್ದಾರೆ.



ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಲಸಿಕಾ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕಾಗಿ ಒಟ್ಟು 548 ಲಸಿಕಾ ಕೇಂದ್ರಗಳನ್ನು (ಬೂತ್‌ಗಳು) ತೆರೆಯಲಾಗುತ್ತಿದೆ. ಅಭಿಯಾನದ ಯಶಸ್ವಿ ಅನುಷ್ಠಾನ ಹಾಗೂ ಮೇಲ್ವಿಚಾರಣೆಗಾಗಿ 110 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದ್ದು, 2,400 ಲಸಿಕಾ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.


ಜಿಲ್ಲೆಯಲ್ಲಿರುವ 0–5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಪೋಲಿಯೊ ಹನಿ ಹಾಕಿಸುವಂತೆ ಪೋಷಕರಿಗೆ ಮನವಿ ಮಾಡಿದ ಅವರು, ಈ ಹಿಂದೆ ಮಕ್ಕಳಿಗೆ ಪೋಲಿಯೊ ಹನಿ ನೀಡಲಾಗಿದ್ದರೂ ಸಹ, ಅಭಿಯಾನದ ಅವಧಿಯಲ್ಲಿ ಮತ್ತೊಮ್ಮೆ ಹನಿ ಹಾಕಿಸುವುದು ಅತ್ಯಗತ್ಯವಾಗಿದೆ ಎಂದು ಹೇಳಿದರು.

ಜೂನ್ 28ರಿಂದ ಜುಲೈ 1ರವರೆಗೆ ನಡೆಯುವ ಈ ವಿಶೇಷ ಅಭಿಯಾನದಲ್ಲಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಆರೋಗ್ಯ ಇಲಾಖೆ ಅಗತ್ಯ ಕ್ರಮ ಕೈಗೊಂಡಿದ್ದು, ಪೋಷಕರು ಸಹಕರಿಸಬೇಕು ಎಂದು ಕೋರಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಿರಂಜನ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಮಂಜುನಾಥ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ರಾಜು, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಪದ್ಮಾವತಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಕಿರಣ್ ಶಂಕರ್, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸೀಗೆಬಾಗಿಯ ವರದನಾಯಕ ಅವರ ವರ್ಣರಂಜಿತ ಪಯಣ

# ಕ್ಯಾಮೆರಾ ಕಣ್ಣಿನ ಕಲಾ ತಪಸ್ವಿ





**ಹುಳಿಯಾರು:** ಮಾತುಗಳಲ್ಲಿ ವರ್ಣಿಸಲು ಸಾಧ್ಯವಾಗದ ಅದ್ಭುತ ಭಾವನೆಗಳನ್ನು ಒಂದು ಸುಂದರವಾದ ಛಾಯಾಚಿತ್ರ ಹೇಳಬಲ್ಲುದು. ಹಳ್ಳಿಯ ಸೊಗಡು, ಸಾಂಸ್ಕೃತಿಕ ಉತ್ಸವಗಳು, ಪ್ರಕೃತಿಯ ವಿಸ್ಮಯ ಹಾಗೂ ಮುಗ್ಧ ಮುಖಗಳಲ್ಲಿನ ಭಾವನೆಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಾ, ಛಾಯಾಗ್ರಹಣವನ್ನೇ ತಪಸ್ಸನ್ನಾಗಿಸಿಕೊಂಡವರು ತುಮಕೂರು ಜಿಲ್ಲೆಯ ಹುಳಿಯಾರು ಹೋಬಳಿಯ ಸೀಗೆಬಾಗಿಯ ಮೂಲದ ಪ್ರತಿಭೆ ಟಿ.ಪಿ.ವರದನಾಯಕ. ಕಳೆದ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಚಿತ್ರಕಲೆ ಹಾಗೂ ವೃತ್ತಿಪರ ಛಾಯಾಗ್ರಹಣದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಇವರ ಸಾಧನೆಯ ಪಯಣ ನಿಜಕ್ಕೂ ಯುವ ಪೀಳಿಗೆಗೆ ಪ್ರೇರಣಾದಾಯಿ.

**ಬೆಂಗಳೂರಿನಲ್ಲಿ ಜೂ.27, 28 ಏಕವ್ಯಕ್ತಿ ಕಲಾ ಪ್ರದರ್ಶನ**

**ಚಿತ್ರಕಲೆಯಿಂದ ಛಾಯಾಗ್ರಹಣದ ಕಡೆಗೆ:** ಸೀಗೆಬಾಗಿ ಪಾಪಣ್ಣ ಅವರ ಪುತ್ರ ವರದನಾಯಕ ಅವರಿಗೆ ಕಲೆ ಎನ್ನುವುದು ಹುಟ್ಟಿನಿಂದಲೇ ಒಲಿದುಬಂದ ಸಿದ್ಧಿ. ಚಿತ್ರಕಲೆಯಲ್ಲಿ ತಮಗಿದ್ದ ಆಸಕ್ತಿಯಿಂದಾಗಿ ಕಲಾ ಮಾಸ್ಟರ್ ಹಾಗೂ ಚಿತ್ರಕಲೆಯಲ್ಲಿ ಪದವಿ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಕಲಾತ್ಮಕ ದೃಷ್ಟಿಕೋನವನ್ನು ಹೊಂದಿದ್ದ ಇವರು ಮುಂದೆ ಆರಿಸಿಕೊಂಡಿದ್ದು ವೃತ್ತಿಪರ ಛಾಯಾಗ್ರಹಣದ ಹಾದಿ. ಕಳೆದ 24 ವರ್ಷಗಳಿಗೂ ಹೆಚ್ಚು ಕಾಲದಿಂದ ವೃತ್ತಿಪರ ಛಾಯಾಗ್ರಹಣದಲ್ಲಿ ತೊಡಗಿಸಿಕೊಂಡಿರುವ ಇವರು, ಮದುವೆ ಹಾಗೂ ಸೃಜನಶೀಲ ಈವೆಂಟ್‌ಗಳ ಛಾಯಾಗ್ರಹಣದಲ್ಲೂ ಪರಿಣತಿ ಹೊಂದಿದ್ದಾರೆ. ಕೇವಲ ವಾಣಿಜ್ಯ ಉದ್ದೇಶದ ಕ್ಲಿಕ್‌ಗಳಿಗೆ ಸೀಮಿತವಾಗದೆ ಅವರ ಕ್ಯಾಮೆರಾ ಕಣ್ಣು ಸದಾ ಸೃಜನಶೀಲ ವಿಷಯಗಳತ್ತ ಸಾಗುತ್ತದೆ.



**ಕ್ಯಾಮೆರಾದಲ್ಲಿ ಅರಳಿದ ಗ್ರಾಮೀಣ ಭಾರತದ ಜೀವಂತಿಕೆ:** ವರದನಾಯಕ ಅವರ ಛಾಯಾಗ್ರಹಣದ ದೊಡ್ಡ ಶಕ್ತಿಯೆಂದರೆ ಅದು ಹಳ್ಳಿಗಳ ಸಾಂಸ್ಕೃತಿಕ ಸೊಗಡನ್ನು ಬಿಂಬಿಸುವುದು. ಗ್ರಾಮೀಣ ಭಾಗದ ಹಬ್ಬ ಹರಿದಿನಗಳು, ಧಾರ್ಮಿಕ ಆಚರಣೆಗಳು, ಸಂಪ್ರದಾಯಗಳು, ಬೀದಿ ಬದಿಯ ಜೀವಂತ ಕ್ಷಣಗಳು ಹಾಗೂ ಪ್ರಕೃತಿಯ ಸೌಂದರ್ಯ ಅವರ ಲೆನ್ಸ್‌ನಲ್ಲಿ ಮರುಜೀವ ಪಡೆಯುತ್ತವೆ. ಹಳ್ಳಿಯ ಒಲೆಯ ಮುಂದೆ ಅಡುಗೆ ಮಾಡುತ್ತಾ ಮುಗುಳ್ನಗುವ ತಾಯಿ–ಮಗನ ಚಿತ್ರ, ಮಗುವಿಗೆ ನೀರು ಸುರಿದು ಸ್ನಾನ ಮಾಡಿಸುವ ವಾತ್ಸಲ್ಯದ ಕಪ್ಪು–ಬಿಳುಪು ಚಿತ್ರ, ಧೂಳಿನ ನಡುವೆ ಮಕ್ಕಳು ಫುಟ್‌ಬಾಲ್ ಆಡುತ್ತಿರುವ ಸಡಗರ, ಜಲ್ಲಿಕಟ್ಟು ಹಬ್ಬದ ರೋಮಾಂಚನಕಾರಿ ದೃಶ್ಯ, ಕರಾವಳಿಯ ಸಾಂಸ್ಕೃತಿಕ ವೈಭವ, ಶ್ರವಣಬೆಳಗೊಳದ ಬಾಹುಬಲಿಯ ಭವ್ಯ ಮಹಾಮಸ್ತಕಾಭಿಷೇಕ, ಗಜಪಡೆಯ ನಡಿಗೆ, ಪ್ರಕೃತಿಯ ಮಡಿಲಿನಲ್ಲಿ ಹಕ್ಕಿಗಳ ಸೃಜನಶೀಲ ನೋಟಗಳು ಇವರ ಅಪೂರ್ವ ಕಲಾಚಿಂತನೆಗೆ ಸಾಕ್ಷಿಯಾಗಿವೆ.

**ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾರಿದ ಕೀರ್ತಿಪತಾಕೆ:** ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ವರದನಾಯಕ ಅವರು ಪ್ರತಿಷ್ಠಿತ ಯೂತ್ ಫೋಟೋಗ್ರಾಫಿಕ್ ಸೊಸೈಟಿ ಸಕ್ರಿಯ ಸದಸ್ಯರಾಗಿದ್ದಾರೆ. ಇವರ ಕಲಾತ್ಮಕ ಚಿತ್ರಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಲೂನ್‌ಗಳಲ್ಲಿ ಪ್ರದರ್ಶನಗೊಂಡು ನೂರಾರು ಪ್ರಶಸ್ತಿ ಹಾಗೂ ಮನ್ನಣೆಗಳನ್ನು ತಂದುಕೊಟ್ಟಿವೆ. ಇವರು 2024 ರ ಭಾರತದ ಟಾಪ್ ಎಕ್ಸಿಬಿಟರ್ಸ್ ಪಟ್ಟಿಯಲ್ಲಿ 5 ನೇ ಶ್ರೇಯಾಂಕ ಗಳಿಸಿದ್ದಾರೆ. ಇವರ ಮೊನೊಕ್ರೋಮ್ (ಕಪ್ಪು–ಬಿಳುಪು) ಮತ್ತು ಪ್ರಕೃತಿ ಚಿತ್ರಗಳು ಅಮೆರಿಕಾದ ಫೋಟೋಗ್ರಾಫಿಕ್ ಸೊಸೈಟಿ ಮತ್ತು ಇಂಡಿಯನ್ ಫೋಟೋಗ್ರಫಿ ಫೆಡರೇಷನ್ ಸ್ಪರ್ಧೆಗಳಲ್ಲಿ ಸರಣಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿವೆ. ಕೇವಲ ನಿಶ್ಚಲ ಚಿತ್ರಗಳಲ್ಲದೆ, ಇವರು ನಿರ್ಮಿಸಿದ ಸಾಕ್ಷ್ಯಚಿತ್ರಕ್ಕೆ 2019 ರಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಪ್ರಶಸ್ತಿ ಲಭಿಸಿದೆ.

ಗ್ರಾಮೀಣ ಭಾಗದಿಂದ ಬಂದು ಕೇವಲ ಕಠಿಣ ಪರಿಶ್ರಮ ಮತ್ತು ಕಲಾ



ಕಣ್ಣಿನಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ವರದನಾಯಕ ಅವರ ಕಲಾ ಪ್ರೇಮ ಶ್ಲಾಘನೀಯ. ಇವರ ಕ್ಯಾಮೆರಾ ಕಣ್ಣು ಮತ್ತಷ್ಟು ಅಪರೂಪದ ಕ್ಷಣಗಳನ್ನು ಸೆರೆಹಿಡಿಯಲಿ, ಕಲಾ ಲೋಕವನ್ನು ಶ್ರೀಮಂತಗೊಳಿಸಲಿ ಎಂಬುದೇ ಕಲಾಭಿಮಾನಿಗಳ ಆಶಯ.

**ಜೂ.27, 28 ಏಕವ್ಯಕ್ತಿ ಕಲಾ ಪ್ರದರ್ಶನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದೊಂದಿಗೆ ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿರುವ ಪ್ರಸಿದ್ಧ ವೆಂಕಟಪ್ಪ ಆರ್ಟ್ ಗ್ಯಾಲರಿಯಲಿ ಜೂನ್ 27 ಮತ್ತು 28 ರಂದು ಬೆಳಗ್ಗೆ 11 ರಿಂದ ವರದನಾಯಕ ಅವರ ಏಕವ್ಯಕ್ತಿ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ.

ಕ್ಯಾಮೆರಾವನ್ನು ಬರೀ ಚಿತ್ರ ತೆಗೆಯುವ ಸಾಧನವಾಗಿ ಬಳಸದೆ, ಅದಕ್ಕೊಂದು ಕಲಾತ್ಮಕ ಜೀವ ನೀಡುವ ವರದನಾಯಕ ಅವರ ಈ ಏಕವ್ಯಕ್ತಿ ಕಲಾ ಪ್ರದರ್ಶನವು ಪ್ರತಿಯೊಬ್ಬ ಕಲಾಪ್ರೇಮಿಯೂ ನೋಡಲೇಬೇಕಾದ ದೃಶ್ಯ ಕಾವ್ಯವಾಗಿದೆ. ನಮ್ಮ ಗ್ರಾಮೀಣ ಭಾಗದ ಪ್ರತಿಭೆಯೊಂದು ರಾಜಧಾನಿಯ ಕಲಾ ಗ್ಯಾಲರಿಯಲ್ಲಿ ಈ ಮಟ್ಟದ ಸಾಧನೆ ತೋರುತ್ತಿರುವುದು ಇಡೀ ಜಿಲ್ಲೆಗೆ ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮವು ಕಲಾಪ್ರೇಮಿಗಳಿಗೆ ಒಂದು ದೃಶ್ಯ ವೈಭವವನ್ನು ಉಣಬಡಿಸಲಿದೆ.

## ಮದುವೆ ಹಾಗೂ ಶುಭಕಾರ್ಯಗಳಿಗೆ ಮೆರುಗು ಹೆಚ್ಚಿಸುವ ಸ್ವರ್ಣಭರಣ

# ವಿನೂತನ ಆಭರಣ ಪ್ರದರ್ಶನ-ಮಾರಾಟ



**ತುಮಕೂರು:** ಮದುವೆ, ಹಾಗೂ ಶುಭಕಾರ್ಯಗಳಿಗೆ ಮೆರಗು ನೀಡಲು ತುಮಕೂರಿನಲ್ಲಿ ವಿನೂತನ ಆಭರಣ ಪ್ರದರ್ಶನ ಮತ್ತು ಮಾರಟವನ್ನು ಒಂದೇ ವೇದಿಕೆಯಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

ದೇಶದ 20 ಅಗ್ರ ಶ್ರೇಣಿಯ ಆಭರಣ ತಯಾರಕರು ಭಾಗವಹಿಸುತ್ತಿರುವ 'ದ ಜ್ಯುವೆಲರಿ ಶೋ' ಪ್ರದರ್ಶನ ಮತ್ತು ಮಾರಾಟದ ಉತ್ಸವಕ್ಕೆ ನಿಮಗೆ ಆದರದ ಸ್ವಾಗತ ಅಮೋಘವಾದ ಭಾರತೀಯ ಒಡವೆಗಳ ಉತ್ಸವವನ್ನು ಇದೇ ಜೂನ್ 26, 27 ಮತ್ತು 28, 2026 'ಬಂಡಿಮನೆ ಕಲ್ಯಾಣ ಮಂಟಪ'ದಲ್ಲಿ ಆಯೋಜಿಸಲಾಗಿದ್ದು, ಈ ಆಭರಣ ಮೇಳವನ್ನು ಜನಪ್ರಿಯ ನಟಿ 'ಸೋನಾಲ್ ಮೊಂಥೆರೋ' ಅವರು ಶುಕ್ರವಾರ ಜೂನ್ 26, 2026 ಮಧ್ಯಾಹ್ನ 12–30ಕ್ಕೆ ಉದ್ಘಾಟಿಸಲಿದ್ದಾರೆ.

ಆಭರಣ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚಿನದಾಗಿದ್ದು, ನಂಬಿಕಸ್ತ ಹೂಡಿಕೆಯೂ ಆಗಿದೆ. ಈ ಮೇಳದಲ್ಲಿ ಪ್ರಶಸ್ತಿ ವಿಜೇತ ಹಾಗೂ ಹೆಸರಾಂತ ಆಭರಣ ಮಳಿಗೆಗಳವರು ಭಾಗವಹಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಮುಂಬರುವ ಮದುವೆ ಸಮಾರಂಭ ಹಾಗೂ ಹಬ್ಬದ ಶುಭ ಸಂದರ್ಭದಲ್ಲಿ ಆಭರಣಗಳನ್ನು ಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ. ತುಮಕೂರು ನಗರ ಮತ್ತು ಸುತ್ತಮುತ್ತಲಿನ ನಾಗರೀಕರಿಗೆ ಆಭರಣಗಳನ್ನು ನೋಡಲು ಮತ್ತು ಕೊಳ್ಳಲು ಈ ಮೇಳದ ಮೂಲಕ ಅನುವು ಮಾಡಿ ಕೊಡಲಾಗಿದೆ. ಭಾರತ ದೇಶದ ವಿವಿಧ ಕುಶಲಕರ್ಮಿಗಳು ತಯಾರಿಸಿದಂತಹ ವಿಭಿನ್ನ ಶೈಲಿಯ ಆಭರಣಗಳು ಈ ಮೇಳದಲ್ಲಿ ದೊರೆಯಲಿವೆ.

ಈ ಮೇಳವನ್ನು ಗೋಲ್ಡನ್ ಕ್ರೆಪರ್ ಸಂಸ್ಥೆಯ ಜಗದೀಶ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿದ್ದಾರೆ. ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸಲಿರುವ ಈ ಮೇಳದಲ್ಲಿ ವಿಶೇಷ ವಿನ್ಯಾಸಗಳನ್ನೊಳಗೊಂಡ ಆಭರಣಗಳನ್ನು ಪ್ರದರ್ಶನ ಹಾಗೂ ಮಾರಟಕ್ಕೆ ಇಟ್ಟಿರುತ್ತಾರೆ. ಎಲ್ಲಾ ಚಿನ್ನದ ಆಭರಣಗಳು ಬಿಐಎಸ್ ಹಾಲ್ ಮಾರ್ಕ್ ಹೊಂದಿರುತ್ತದೆ, ವಜ್ರಾಭರಣಗಳು ಅಂತರರಾಷ್ಟ್ರೀಯ ಗುಣಮಟ್ಟದ ಜಿಐಎ/ಐಜಿಐ ಪ್ರಮಾಣಿತ ಹೊಂದಿರುತ್ತದೆ. ಆಭರಣ ಮಳಿಗೆಗಳ ಸದಸ್ಯರು, ಚಿನ್ನಾಭರಣ ಮತ್ತು ವಜ್ರಾಭರಣ ಬಗ್ಗೆ ಎಲ್ಲಾ ತರಹದ ಉಚಿತ ಮಾಹಿತಿಯನ್ನು ನೀಡುತ್ತಾರೆ. ಖರೀದಿದಾರರು ಹಳೇ ಚಿನ್ನವನ್ನು ಬದಲಾಯಿಸಿಕ್ಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಮೇಳದ ನಂತರವೂ ಗ್ರಾಹಕರಿಗೆ ಆಭರಣಗಳಿಗೆ ಸಂಬಂಧಿಸಿದ ಸೇವೆಯನ್ನು ಒದಗಿಸಲಾಗುವುದು. ತುಮಕೂರಿನ ಸುತ್ತ ಮುತ್ತಲಿನ ಜನರ ಅಭಿರುಚಿಯನ್ನು ಅರಿತು ಅವರ ಇಚ್ಛೆಗನುಗುಣವಾಗಿ ಆಭರಣಗಳನ್ನು ತಯಾರಿಸಲಾಗಿದೆ. ಮುಂದಿನ ದಿನಗಳಲ್ಲಿ ಬರುವಂತಹ ಹಬ್ಬ ಹರಿದಿನಗಳಿಗೆ ಹಾಗೂ ಮದುವೆ ಸಮಾರಂಭಗಳಿಗೆ ಆಭರಣ ಖರೀದಿಸಲು ಒಂದೇ ವೇದಿಕೆಯಲ್ಲಿ ಭಾರತದ 20 ಹೆಸರಾಂತ ಆಭರಣ ಮಳಿಗೆಗಳು ಕಣ್ಣುಗಳಿಗೆ ರಸದೌತಣ ನೀಡಲಿವೆ.



ಅರ್ಜುನ ವರ, ಗಜರಾಜ್, ಸಿಂಹ ಜ್ಯುವೆಲರ್ಸ್, ಶ್ರೀಗಣೇಶ್ ಡೈಮೆಂಡ್ಸ್, ಶ್ರೀಲಕ್ಷ್ಮೀ ಡೈಮೆಂಡ್ಸ್, ವಿವಾಂತ್, ನಿರ್ಮಲ್ ಜ್ಯುವೆಲರ್ಸ್, ಸಪ್ತಷಿ, ಟ್ರೈ ಡೈಯಾ, ರೂಪಂ ಸಿಲ್ವರ್, ಎಮ್ಮಡಿ ಸಿಲ್ವರ್, ಸ್ವಸ್ತ, ನಿತ್ಯಾಸ್ (ವಿಶಾಖಪಟ್ಟಣಂ), ಬಾಲಾಜಿ ಪರ್ಲ್ಸ್(ಚೆನ್ನೈ) ಭಾಗವಹಿಸುತ್ತಿರುವ ಆಭರಣ ಮಳಿಗೆಗಳು. ತುಮಕೂರಿನಿಂದ ಶ್ರೀ ಮಹಾಲಕ್ಷ್ಮಿ ಜ್ಯುವೆಲರ್ಸ್ ಭಾಗವಹಿಸುತ್ತಿರುವ ಆಭರಣ ಮಳಿಗೆಗಳು.

**26, 27 ಮತ್ತು 28 ಜೂನ್ 2026**
**ಶುಕ್ರವಾರ, ಶನಿವಾರ–ಭಾನುವಾರ**
**ಬಂಡಿಮನೆ ಕಲ್ಯಾಣ ಮಂಟಪ, ತುಮಕೂರು.**


ಗ್ರಾಹಕರ ಅಭಿರುಚಿ ಮತ್ತು ಬಜೆಟ್‌ಗನುಗುಣವಾಗಿ ಚಿನ್ನ ಮತ್ತು ವಜ್ರದ ಆಭರಣಗಳು ತುಮಕೂರಿನ ಜನತೆಗೆ ದೊರೆಯಲಿವೆ. ಈ ಬಾರಿಯ ಮೇಳದಲ್ಲಿ ಎಲ್ಲಾ ಆಭರಣ ಪ್ರಿಯರು ಪ್ರದರ್ಶನದಲ್ಲಿಟಿರುವಂತಹ ಆಭರಣವನ್ನು ಕಂಡು ರೋಮಾಂಚನಗೊಳ್ಳುತ್ತಾರೆಂಬ ಭರವಸೆ ನಮಗಿದೆ, ಈ ಮೇಳವು ಎಲ್ಲಾ ರೀತಿಯ ಗ್ರಾಹಕರಿಗೆ ಖಂಡಿತವಾಗಿಯೂ ತೃಪ್ತಿದಾಯಕವಾಗಿರುತ್ತದೆ, ಈ ಪ್ರದರ್ಶನ ಕೇವಲ 3 ದಿನಗಳಾಗಿದ್ದು, ಸರ್ವರು ಇದರ ಲಾಭಪಡೆಯಬೇಕೆಂದು ಗೋಲ್ಡನ್ ಕ್ರೆಪರ್ ಸಂಸ್ಥೆ ಕೋರಿದೆ.



# ಯೋಗದ ಹೊಸ ಜಾಗತಿಕ ಅವತಾರ:
## ಪುರಾತನ ಶಿಸ್ತಿನಿಂದ ಆಧುನಿಕ ಅನಿವಾರ್ಯತೆಯವರೆಗೆ



| ರೂಪ ಮಂಜುನಾಥ ಹೊಳೆನರಸೀಪುರ




ಭಾರತದ ಪುಣ್ಯಭೂಮಿಯಲ್ಲಿ ಸಹಸ್ರಾರು ವರ್ಷಗಳ ಹಿಂದೆ ಋಷಿಮುನಿಗಳ ಅಂತರಂಗದ ಶೋಧನೆಯಾಗಿ ಜನ್ಮತಾಳಿದ 'ಯೋಗ ವಿಜ್ಞಾನ' ಇಂದು ಜಗತ್ತಿನ ಗಡಿಗಳನ್ನೆಲ್ಲಾ ದಾಟಿ ನಮ್ಮ ಹೆಮ್ಮೆಯ ಸನಾತನ ಹಾಗೂ ಸಾಂಸ್ಕೃತಿಕ ರಾಯಭಾರಿ ಎನಿಸಿಕೊಂಡಿದೆ. ಒಂದು ಕಾಲದಲ್ಲಿ ಕೇವಲ ಹಿಮಾಲಯದ ಗುಹೆಗಳಲ್ಲಿ, ಕಾಡಿನ ಪ್ರಶಾಂತ ವಾತಾವರಣದಲ್ಲಿ ಅಥವಾ ಗುರುಕುಲದ ಪವಿತ್ರ ಚೌಕಟ್ಟಿನಲ್ಲಿ ಮಾತ್ರ ಸೀಮಿತವಾಗಿದ್ದ ಈ ಕಲೆ, ಇಂದು ನ್ಯೂಯಾರ್ಕ್‌ನ ಬಹುಮಹಡಿ ಕಟ್ಟಡಗಳಿಂದ ಹಿಡಿದು ಟೋಕಿಯೋ ನಗರದ ಹವಾನಿಯಂತ್ರಿತ ಸ್ಟುಡಿಯೋಗಳವರೆಗೆ ಜಾಗತಿಕ ಜೀವನಶೈಲಿಯ ಅವಿಭಾಜ್ಯ ಅಂಗವಾಗಿ ಮಾರ್ಪಟ್ಟಿದೆ.

ಆದರೆ, ಕಾಲ ಬದಲಾದಂತೆ ವಿಧಿವಿಧಾನಗಳು, ಶೈಲಿಗಳು ಬದಲಾಗುತ್ತವೆ ಎನ್ನುವ ಮಾತು ಯೋಗಕ್ಕೂ ಅನ್ವಯಿಸುತ್ತದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಯೋಗ ಎನ್ನುವುದು ಕೇವಲ ಸಾಂಪ್ರದಾಯಿಕ 'ಹಠ ಯೋಗ' ಅಥವಾ ಆಸನಗಳಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಜಾಗತಿಕ ಮಟ್ಟದಲ್ಲಿ ಆರೋಗ್ಯ ಮತ್ತು ಫಿಟ್‌ನೆಸ್‌ಗೆ ಸಿಗುತ್ತಿರುವ ಅಭೂತಪೂರ್ವ ಆದ್ಯತೆಯಿಂದಾಗಿ, ಈ ಪ್ರಾಚೀನ ಕಲೆ ಜಗತ್ತಿನಾದ್ಯಂತ ವಿಭಿನ್ನ ದೇಶಗಳಲ್ಲಿ ಹೊಸ ರೂಪ, ಹೊಸ ಧಾತು ಹಾಗೂ ಹೊಚ್ಚಹೊಸ ಶೈಲಿಗಳನ್ನು ಪಡೆದುಕೊಂಡು ಮರುಹುಟ್ಟು ಪಡೆಯುತ್ತಿದೆ.

**ಅಧ್ಯಾಯ 1**

ಇಂದು ಪಾಶ್ಚಾತ್ಯರನ್ನು ಹುಚ್ಚೆಬ್ಬಿಸುತ್ತಿರುವ 40 ಡಿಗ್ರಿ ಬಿಸಿ ಕೋಣೆಯ 'ಹಾಟ್ ಯೋಗ'ದಿಂದ ಹಿಡಿದು, ಹಿಮಾಲಯದ ಗುಪ್ತ ಕ್ರಿಯೆಗಳನ್ನು ಇಂದಿನ ಪೀಳಿಗೆಗೆ ದಾಟಿಸುತ್ತಿರುವ 'ಸತ್ವ ಯೋಗ'ದವರೆಗೆ; ಗಾಳಿಯಲ್ಲಿ ತೇಲುತ್ತಾ ಮಾಡುವ 'ಏರಿಯಲ್ ಯೋಗ'ದಿಂದ ಹಿಡಿದು ಕೇವಲ ದೈಹಿಕ ಶಕ್ತಿಗೆ ಒತ್ತು ನೀಡುವ 'ಪವರ್ ಯೋಗ'ದವರೆಗೆ ಯೋಗದ ಮುಖಗಳು ಇಂದು ಹತ್ತಾರು! ಇವೆಲ್ಲವೂ ಕೇವಲ ತೂಕ ಇಳಿಸುವ ತಂತ್ರಗಳಲ್ಲ; ಬದಲಿಗೆ ಇಂದಿನ ಅತ್ಯಂತ ಯಾಂತ್ರಿಕ ಹಾಗೂ ಒತ್ತಡದ ಬದುಕಿನಲ್ಲಿ ಆಂತರಿಕ ಸಮತೋಲನವನ್ನು ಕಂಡುಕೊಳ್ಳಲು ಆಧುನಿಕ ಮನುಷ್ಯ ಕಂಡುಕೊಂಡಿರುವ ಹೊಸ ದಾರಿಗಳಾಗಿವೆ.

ಹಾಗಾದರೆ, ಜಾಗತಿಕವಾಗಿ ಅಲೆಯೆಬ್ಬಿಸುತ್ತಿರುವ ಈ ವಿಭಿನ್ನ ಯೋಗ ಪ್ರಕಾರಗಳ ಹುಟ್ಟು ಎಲ್ಲಿಂದ ಆಯಿತು? ಇವುಗಳ ಹಿಂದಿರುವ ಆಸಕ್ತಿದಾಯಕ ಇತಿಹಾಸವೇನು? ವೈಜ್ಞಾನಿಕವಾಗಿ ಇವು ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ಹೇಗೆ ಪ್ರಭಾವ ಬೀರುತ್ತವೆ? ಮತ್ತು ಇಷ್ಟೊಂದು ವೈವಿಧ್ಯತೆಯ ನಡುವೆ ನಮ್ಮ ದೇಹ ಪ್ರಕೃತಿಗೆ ಸೂಕ್ತವಾದ ಯೋಗ ಯಾವುದು? ಈ ಎಲ್ಲಾ ಕೌತುಕದ ಪ್ರಶ್ನೆಗಳಿಗೆ ಉತ್ತರ ಹುಡುಕುವ, ಬದಲಾಗುತ್ತಿರುವ ಯೋಗದ ಜಾಗತಿಕ ಮುಖಗಳನ್ನು ಪರಿಚಯಿಸುವ ವಿಶೇಷ ಸರಣಿ ಇಂದಿನಿಂದ ನಿಮಗಾಗಿ, ಸಂಪಾದಕರ ಆತ್ಮೀಯ ಸಹಕಾರದಲ್ಲಿ ಪ್ರಸ್ತುತ ಪಡಿಸುತ್ತಿರುವೆ.

ಪ್ರತಿ ಜೂನ್ 21 ರಂದು, ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಜಗತ್ತು ಸಂಭ್ರಮದಲ್ಲಿ ಚಾಪೆಯನ್ನು ಹಾಸುತ್ತದೆ ? ಉದ್ಯಾನವನಗಳು, ಕಚೇರಿಗಳು, ಮಿಲಿಟರಿ ನೆಲೆಗಳು ಮತ್ತು ಯುದ್ಧನೌಕೆಗಳ (aircraft carriers) ಮೇಲೆಯೂ ಸಹ ಯೋಗಾಭ್ಯಾಸ ನಡೆಸುವ ಸಡಗರದ ಕ್ಷಣಗಳನ್ನು ಕಾಣಬಹುದು. 2015 ರಲ್ಲಿ ವಿಶ್ವಸಂಸ್ಥೆಯಲ್ಲಿ ಭಾರತ ಮಂಡಿಸಿದ ಪ್ರಸ್ತಾಪವಾಗಿ ಪ್ರಾರಂಭವಾದ ಇದು, ಇಂದು ನಮ್ಮ ಕಾಲದ ಅತ್ಯಂತ ಪ್ರಮುಖ ಜಾಗತಿಕ ಆರೋಗ್ಯ ಆಚರಣೆಗಳಲ್ಲಿ ಒಂದಾಗಿದೆ. ಆದರೆ ಸಾಮೂಹಿಕ ಯೋಗ ಅವಧಿಗಳ ಪರಿಚಿತ ಚಿತ್ರಗಳ ಹಿಂದೆ ಒಂದು ಶಾಂತವಾದ, ಹೆಚ್ಚು ಆಸಕ್ತಿದಾಯಕ ಕಥೆಯಿದೆ: ಯೋಗವು ವಿಜ್ಞಾನ, ತಂತ್ರಜ್ಞಾನ ಮತ್ತು ಆಧುನಿಕ ಜೀವನದ ವಿಶಿಷ್ಟ ಆತಂಕಗಳಿಂದ ಮರುರೂಪುಗೊಂಡು, ಸದ್ದಿಲ್ಲದೆ ರೂಪಾಂತರಗೊಳ್ಳುತ್ತಿದೆ.

ದಶಕಗಳ ಕಾಲ, ಯೋಗದ ಜಾಗತಿಕ ಚಿತ್ರಣ ಬಹಳ ವಿರಳ ಹಾಗೂ ಸರಳವಾಗಿತ್ತು ? ಮೈ ಕೈ ಹಿಗ್ಗಿಸುವುದು (stretch), ಉಸಿರಾಡುವುದು, ವಿಶ್ರಾಂತಿ ಪಡೆಯುವುದು. ಯೋಗವೆನ್ನುವುದು ಸಾಮಾನ್ಯ ಜನರಿಗೆ ಬೇಕಿಲ್ಲದ ವಿಷಯವಾಗಿತ್ತು. ಆ ದಿನಗಳ ಜೀವನಶೈಲಿಯೂ ಹಾಗೇ ಕಟ್ಟುನಿಟ್ಟಿನ, ಶ್ರಮಜೀವನ ಹಾಗೂ ಆರೋಗ್ಯಪೂರ್ಣ ಆಹಾರ ಸೇವನೆ, ಶುದ್ದ ಪರಿಸರದೊಂದಿಗೆ ಜೊತೆಯಾಗಿತ್ತು. ನಂತರದ ದಿನಗಳಲ್ಲಿ, ನಮ್ಯತೆ (flexibility) ಅಥವಾ ಜಿಮ್ ದಿನಚರಿಯಿಂದ ವಿರಾಮವನ್ನು ಬಯಸುವ ಜನರಿಗೆ ಇದು ಒಂದು ಪ್ರವೇಶ ದ್ವಾರದ ಅಭ್ಯಾಸವಾಗಿತ್ತು. ಆದರೆ ಆ ಚಿತ್ರಣ ಈಗ ಸಾಕಾಗುತ್ತಿಲ್ಲ. 2026 ರಲ್ಲಿ, ನರವಿಜ್ಞಾನ (neuroscience), ವರ್ತನಾತ್ಮಕ ಔಷಧ (behavioral medicine) ಮತ್ತು ಎಪಿಜೆನೆಟಿಕ್ಸ್‌ನ ಸಂಶೋಧಕರು ಯೋಗವನ್ನು ಕೇವಲ ಒಂದು ಫಿಟ್‌ನೆಸ್ ಟ್ರೆಂಡ್ ಆಗಿ ನೋಡದೆ, ಸ್ವಯಂ-ನಿಯಂತ್ರಣದ ಒಂದು ಅಳೆಯಬಹುದಾದ ವ್ಯವಸ್ಥೆಯಾಗಿ ಪರಿಗಣಿಸುತ್ತಿದ್ದಾರೆ. ಇದು ನರಮಂಡಲ, ಉರಿಯೂತದ ಮಾರ್ಗಗಳು (inflammatory pathways) ಮತ್ತು ಭಾವನಾತ್ಮಕ ಸಮತೋಲನದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತಿದ್ದಾರೆ. ಪತಂಜಲಿಯು ಯೋಗಸೂತ್ರಗಳಲ್ಲಿ ಮನಸ್ಸಿನ ನಿಯಂತ್ರಣ ಎಂದು ವಿವರಿಸಿದ್ದನ್ನು, ಈಗ ಅಕ್ಷರಶಃ ಹೃದಯ ಬಡಿತದ ವ್ಯತ್ಯಾಸದ ಚಾರ್ಟ್‌ಗಳು (heart-rate variability charts) ಮತ್ತು ಒತ್ತಡದ ಹಾರ್ಮೋನ್ ಪ್ಯಾನೆಲ್‌ಗಳ ಮೇಲೆ ನಕ್ಷೆ ಮಾಡಲಾಗುತ್ತಿದೆ.

ಇದು ಒಂದು ಅರ್ಥದಲ್ಲಿ, ತವರಿಗೆ ಮರಳಿದಂತೆ. ಭಾರತೀಯ ತಾತ್ವಿಕ ಸಂಪ್ರದಾಯಗಳು ? ವೇದಾಂತ, ಕಾಶ್ಮೀರ ಶೈವಿಸಂ, ಮತ್ತು ಸ್ವತಃ ಯೋಗದ ಶಾಸ್ತ್ರೀಯ ಶಾಲೆಗಳು ? ಈ ಅಭ್ಯಾಸವನ್ನು ಕೇವಲ ದೈಹಿಕ ಎಂದು ಎಂದಿಗೂ ಪರಿಗಣಿಸಿಲ್ಲ. ದೇಹವು ಯಾವಾಗಲೂ ಒಂದು ವಾಹನವಾಗಿತ್ತೇ ಹೊರತು ತಲುಪಬೇಕಾದ ತಾಣವಾಗಿರಲಿಲ್ಲ. ಈಗ ಬದಲಾಗಿರುವುದು ಏನೆಂದರೆ, ಪ್ರಪಂಚದ ಉಳಿದ ಭಾಗಗಳು ಧರ್ಮಗ್ರಂಥಗಳ ಮೂಲಕ ಅಲ್ಲದೆ ಪ್ರಯೋಗಾಲಯಗಳ ಮೂಲಕ ಅದೇ ತೀರ್ಮಾನಕ್ಕೆ ಬರುತ್ತಿವೆ ಮತ್ತು ಈ ಎರಡು ಮಾರ್ಗಗಳು ಆಸಕ್ತಿದಾಯಕ ರೀತಿಯಲ್ಲಿ ಒಂದಾಗಲು ಪ್ರಾರಂಭಿಸುತ್ತಿವೆ.

ಪ್ರಾಣಾಯಾಮವನ್ನು ಗಮನಿಸಿ. ಉಸಿರಾಟದ ಕ್ರಿಯೆಯು ಸಹಸ್ರಾರು ವರ್ಷಗಳಿಂದ ಭಾರತೀಯ ಅಭ್ಯಾಸದ ಭಾಗವಾಗಿದೆ, ಆದರೆ ಜಾಗತಿಕ ವೆಲ್ನೆಸ್ ವಲಯಗಳಲ್ಲಿ ಇದನ್ನು ಈಗ ಒಂದು ಪ್ರತ್ಯೇಕ ಕೊಡುಗೆಯಾಗಿ ಮರುಪ್ಯಾಕೇಜ್ ಮಾಡಲಾಗುತ್ತಿದೆ ? ಅಂದರೆ ಆಸನ ತರಗತಿಗಳಿಂದ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವ, ನರಮಂಡಲದ ನಿಯಂತ್ರಣದ ಸಾಧನಗಳಾಗಿ ಮಾರುಕಟ್ಟೆ ಮಾಡಲಾಗುವ 20 ರಿಂದ 30 ನಿಮಿಷಗಳ ಉಸಿರಾಟ-ಕೇಂದ್ರಿತ ಅವಧಿಗಳಾಗಿ ವಿಭಜಿಸಲಾಗುತ್ತಿದೆ. ಒಂದು ಕಾಲದಲ್ಲಿ ದೊಡ್ಡ ಆಧ್ಯಾತ್ಮಿಕ ಚೌಕಟ್ಟಿನಿಂದ ಬೇರ್ಪಡಿಸಲಾಗದ ಸಂಗತಿಯಾಗಿದ್ದನ್ನು, ಈಗ ಬಿಡಿಬಿಡಿಯಾಗಿ ಹೊರತೆಗೆಯಲಾಗುತ್ತಿದೆ, ಅಧ್ಯಯನ ಮಾಡಲಾಗುತ್ತಿದೆ ಮತ್ತು ಮಾರಾಟ ಮಾಡಲಾಗುತ್ತಿದೆ. ಅದರಲ್ಲಿ ಪರೀಕ್ಷಿಸಬೇಕಾದ ವಿಷಯವೊಂದಿದೆ ? ಅದು ನೀಡುವ ಮನ್ನಣೆ ಮತ್ತು ಅದರಿಂದ ಉಂಟಾಗಬಹುದಾದ ವಿಭಜನೆ (fragmentation) ಎರಡೂ ಸಹ!

ತಂತ್ರಜ್ಞಾನವೂ ಈ ರಂಗಕ್ಕೆ ಪ್ರವೇಶಿಸಿದೆ. ಒಂದು ಕಾಲದಲ್ಲಿ ಕೇವಲ ಹೆಜ್ಜೆಗಳನ್ನು ಎಣಿಸುತ್ತಿದ್ದ ಧರಿಸಬಹುದಾದ ಸಾಧನಗಳು (wearable devices) ಈಗ ಹೃದಯ ಬಡಿತದ ವ್ಯತ್ಯಾಸ, ನಿದ್ರೆಯ ವಿನ್ಯಾಸ ಮತ್ತು ಚೇತರಿಕೆಯ ಮಾದರಿಗಳನ್ನು ಪತ್ತೆಹಚ್ಚುತ್ತಿವೆ; ಆ ದತ್ತಾಂಶವನ್ನು ವೈಯಕ್ತಿಕಗೊಳಿಸಿದ ಯೋಗ ಪ್ರೋಟೋಕಾಲ್‌ಗಳಿಗೆ ಮರಳಿ ಒದಗಿಸುತ್ತಿವೆ. ಕೆಲವು ಸ್ಟುಡಿಯೋಗಳು ಎಐ-ಚಾಲಿತ ಸೀಕ್ವೆನ್ಸಿಂಗ್‌ನೊಂದಿಗೆ ಪ್ರಯೋಗಗಳನ್ನು ನಡೆಸುತ್ತಿವೆ, ವ್ಯಕ್ತಿಯ ಬಯೋಮೆಟ್ರಿಕ್ ಸಂಕೇತಗಳ ಆಧಾರದ ಮೇಲೆ ನೈಜ ಸಮಯದಲ್ಲಿ ಅಭ್ಯಾಸವನ್ನು ಸರಿಹೊಂದಿಸುತ್ತಿವೆ. ಗುರುಗಳು ಶಿಷ್ಯನ ಉಸಿರಾಟವನ್ನು ಗಮನಿಸಿ ಅದಕ್ಕೆ ತಕ್ಕಂತೆ ಸರಿಹೊಂದಿಸುವುದಕ್ಕೂ ಇದಕ್ಕೂ ಬಹಳ ದೂರವಿದೆ, ಆದರೂ ಅದರ ಹಿಂದಿನ ಮೂಲ ಪ್ರವೃತ್ತಿ ? ಅಭ್ಯಾಸವು ಒಂದು ನಿರ್ದಿಷ್ಟ ಮಾದರಿಯನ್ನು ಅನುಸರಿಸುವ ಬದಲು ವ್ಯಕ್ತಿಗೆ ಅನುಗುಣವಾಗಿ ಸ್ಪಂದಿಸಬೇಕು ಎಂಬುದು ? ಗಮನಾರ್ಹವಾಗಿ ಹೋಲುತ್ತದೆ.

ಅದೇ ಸಮಯದಲ್ಲಿ, ಯೋಗವು ತನ್ನ ರೂಪದಲ್ಲಿ ಹೆಚ್ಚು ಪ್ರಜಾಪ್ರಭುತ್ವೀಕರಣಗೊಂಡಿದೆ (democratized). ಚೇರ್ ಯೋಗವು ಚಲನೆಯ ಮಿತಿಗಳನ್ನು ಎದುರಿಸುತ್ತಿರುವ ಹಿರಿಯ ನಾಗರಿಕರಿಗೆ ಸಹಾಯ ಮಾಡುತ್ತದೆ. ಪ್ರೆನೆಟಲ್ (ಗರ್ಭಾವಸ್ಥೆಯ) ಯೋಗವು ಗರ್ಭಿಣಿ ತಾಯಂದಿರಿಗೆ ಬೆಂಬಲ ನೀಡುತ್ತದೆ. ನಿಧಾನಗತಿ ಮತ್ತು ಐಚ್ಛಿಕ ಮಾರ್ಪಾಡುಗಳೊಂದಿಗೆ ವಿನ್ಯಾಸಗೊಳಿಸಲಾದ ಟ್ರಾಮಾ-ಇನ್‌ಫಾರ್ಮ್ಡ್ (ಆಘಾತ-ತಿಳುವಳಿಕೆಯ) ತರಗತಿಗಳು, ಸಾಂಪ್ರದಾಯಿಕ ಸ್ಟುಡಿಯೋ ಪರಿಸರವನ್ನು ಭಯಾನಕ ಅಥವಾ ಅತಿಯೆಂದು ಭಾವಿಸುವ ಜನರಿಗೆ ಈ ಅಭ್ಯಾಸವನ್ನು ಸುಲಭವಾಗಿ ಸಿಗುವಂತೆ ಮಾಡುತ್ತಿವೆ. ಮೇಕೆಗಳೊಂದಿಗೆ ಯೋಗ (yoga with goats), ಧ್ವನಿ ಚಿಕಿತ್ಸೆ ಅಥವಾ ಅರೋಮಾಥೆರಪಿಯೊಂದಿಗೆ ಸಂಯೋಜಿಸಲ್ಪಟ್ಟ ಯೋಗದಂತಹ ಹೊಸ ಸ್ವರೂಪಗಳು ಸಹ ಒಂದು ಮೂಲಭೂತ ಸತ್ಯವನ್ನು ಎತ್ತಿ ತೋರಿಸುತ್ತವೆ: ಯೋಗವು ಭರವಸೆ ನೀಡುವ ಪ್ರಶಾಂತತೆಗಾಗಿ ಜನರು ಹಸಿದಿದ್ದಾರೆ ಮತ್ತು ಅದನ್ನು ಅಸಾಂಪ್ರದಾಯಿಕ ಮಾರ್ಗಗಳ ಮೂಲಕವಾದರೂ ಕಂಡುಕೊಳ್ಳಲು ಅವರು ಸಿದ್ಧರಾಗಿದ್ದಾರೆ.

ಕನ್ನಡದ ಓದುಗರಿಗೆ, ಈ ಕ್ಷಣವು ಒಂದು ವಿಶಿಷ್ಟ ದೃಷ್ಟಿಕೋನವನ್ನು ನೀಡುತ್ತದೆ. ಯೋಗವನ್ನು ನಮಗೆ ಯಾರೋ ವಿವರಿಸುತ್ತಿರುವ ವಿದೇಶಿ ಆಮದು ವಸ್ತುವಿನಂತೆ ನಾವು ನೋಡುತ್ತಿಲ್ಲ; ಬದಲಿಗೆ ನಮ್ಮದೇ ಮಣ್ಣಿನಲ್ಲಿ ಬೇರೂರಿರುವ ಅಭ್ಯಾಸವನ್ನು ಜಗತ್ತು ಮರುಶೋಧಿಸುತ್ತಿರುವುದನ್ನು, ಮರುವ್ಯಾಖ್ಯಾನಿಸುತ್ತಿರುವುದನ್ನು ಮತ್ತು ಕೆಲವು ಸಂದರ್ಭಗಳಲ್ಲಿ ಅದರ ಮೂಲವನ್ನು ಹುಡುಕುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ಹೆಮ್ಮೆ ಪಡಬೇಕಾದ ವಿಷಯವಿದೆ, ಆದರೆ ಅಷ್ಟೇ ಜವಾಬ್ದಾರಿಯೂ ಇದೆ ? ಯೋಗವು ಜಾಗತಿಕವಾಗಿ ಬೆಳೆದಂತೆ, ಅದಕ್ಕೆ ಮೊದಲ ಸ್ಥಾನದಲ್ಲಿ ಅರ್ಥವನ್ನು ನೀಡಿದ ತಾತ್ವಿಕ ಆಳವನ್ನು ಕಳೆದುಕೊಂಡು ಕೇವಲ ಒಂದು ವೆಲ್ನೆಸ್ ಸರಕಾಗಿ (wellness commodity) ಕುಗ್ಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ.

ಈ ಲೇಖನ ಸರಣಿಯು ಪ್ರಸ್ತುತ ಪ್ರಪಂಚದಾದ್ಯಂತ ಮನ್ನಣೆ ಪಡೆಯುತ್ತಿರುವ ಅಭ್ಯಾಸಗಳ ನಡುವಿನ ಅದೇ ಸವಾಲುಗಳನ್ನು ಪರಿಶೀಲಿಸುತ್ತದೆ ? ಅನಾವರಣಗೊಳ್ಳುತ್ತಿರುವ ವಿಜ್ಞಾನ, ಬಳಸಲಾಗುತ್ತಿರುವ ತಂತ್ರಜ್ಞಾನ, ತಲುಪುತ್ತಿರುವ ಹೊಸ ಪ್ರೇಕ್ಷಕರು ಮತ್ತು ಈ ಎಲ್ಲವನ್ನೂ ಒಟ್ಟಿಗೆ ಹಿಡಿದಿಟ್ಟುಕೊಳ್ಳುವ ಹಳೆಯ ಮತ್ತು ಹೊಸ ತಾತ್ವಿಕ ಎಳೆಗಳು. ಮುಂದೆ ಬರುವ ಕೆಲವು ವಿಷಯಗಳು ನಿಮಗೆ ಪರಿಚಿತವಾಗಿವೆ ಎನಿಸಬಹುದು. ಕೆಲವು ನಿಮ್ಮನ್ನು ಆಶ್ಚರ್ಯಗೊಳಿಸಬಹುದು. ಒಟ್ಟಾರೆಯಾಗಿ, ಈ ಲೇಖನಗಳು ಒಂದು ಸರಳ ಪ್ರಶ್ನೆಯನ್ನು ಕೇಳಲು ಬಯಸುತ್ತವೆ: ಯೋಗವು ಹೆಚ್ಚು ಜಾಗತಿಕವಾಗುತ್ತಿದ್ದಂತೆ, ಅದು ಪ್ರಾರಂಭವಾದ ಸ್ಥಳಕ್ಕೆ ಇನ್ನೂ ಏನನ್ನು ಬಾಕಿ ಉಳಿಸಿಕೊಂಡಿದೆ?

ಯೋಗದ ಈ ಜಾಗತಿಕ ಜರ್ನಿ ಬರೀ ಶಾರೀರಿಕ ಕಸರತ್ತಲ್ಲ; ಅದು ಮನುಷ್ಯ ತನ್ನನ್ನು ತಾನು ಮರುಶೋಧಿಸಿಕೊಳ್ಳುತ್ತಿರುವ ರೋಚಕ ಇತಿಹಾಸ. ಇಷ್ಟೊಂದು ವೈವಿಧ್ಯತೆಯ ನಡುವೆ ನಮ್ಮ ದೇಹ ಪ್ರಕೃತಿಗೆ ಮತ್ತು ಇಂದಿನ ಜಂಜಾಟದ ಬದುಕಿಗೆ ನಿಜಕ್ಕೂ ಬೇಕಾಗಿರುವ ಯೋಗ ಯಾವುದು? ಬದಲಾಗುತ್ತಿರುವ ಯೋಗದ ಜಾಗತಿಕ ಮುಖಗಳನ್ನು ಅನಾವರಣಗೊಳಿಸುವ, ಅಂತರಂಗದ ಆರೋಗ್ಯಕ್ಕೆ ದಾರಿದೀಪವಾಗುವ ಈ ವಿಶೇಷ ಸರಣಿಯ ಮೊದಲ ಹೆಜ್ಜೆ ಮುಂದಿನ ವಾರದಿಂದ... ನಿಮ್ಮ ಮ್ಯಾಟ್ ಸಿದ್ಧಪಡಿಸಿಟ್ಟುಕೊಳ್ಳಿ! ವಂದನೆಗಳು.

# ಅದ್ದೂರಿ ಮದುವೆ, ಮರುದಿನ ಕೋರ್ಟ್ ಮೆಟ್ಟಿಲು
## ಇದು ಸಂಬಂಧಗಳ ಚೆಲ್ಲಾಟವೇ?



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಮದುವೆ ಎಂಬುದು ಕೇವಲ ಎರಡು ವ್ಯಕ್ತಿಗಳ ಸಂಗಮವಲ್ಲ; ಅದು ಎರಡು ಕುಟುಂಬಗಳ, ಎರಡು ಸಂಸ್ಕೃತಿಗಳ, ಎರಡು ಕನಸುಗಳ ಮತ್ತು ಎರಡು ಹೃದಯಗಳ ಪವಿತ್ರ ಬಂಧನ. ನಮ್ಮ ಸಮಾಜದಲ್ಲಿ ಮದುವೆಯನ್ನು ಒಂದು ಹಬ್ಬದಂತೆ ಆಚರಿಸಲಾಗುತ್ತದೆ. ತಿಂಗಳುಗಳ ಕಾಲ ಸಿದ್ಧತೆಗಳು ನಡೆಯುತ್ತವೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಬೆಳಕುಗಳಿಂದ ಕಂಗೊಳಿಸುವ ಕಲ್ಯಾಣ ಮಂಟಪಗಳು, ಸಂಗೀತದ ಸಡಗರ, ವೈಭವದ ಉಡುಪುಗಳು ಮತ್ತು ಭರ್ಜರಿ ಊಟೋಪಚಾರಗಳ ಮೂಲಕ ಮದುವೆಯನ್ನು ಅದ್ದೂರಿಯಾಗಿ ನಡೆಸಲಾಗುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕಳವಳಕಾರಿ ಬೆಳವಣಿಗೆಯೊಂದು ನಮ್ಮ ಕಣ್ಣೆದುರು ನಡೆಯುತ್ತಿದೆ. ನಿನ್ನೆ ಸಾವಿರಾರು ಜನರ ಸಮ್ಮುಖದಲ್ಲಿ ಮದುವೆಯಾದ ಜೋಡಿಗಳು, ಕೆಲವೇ ದಿನಗಳಲ್ಲಿ ಅಥವಾ ತಿಂಗಳುಗಳಲ್ಲಿ ಕೋರ್ಟ್ ಮೆಟ್ಟಿಲು ಏರುತ್ತಿರುವುದು ಸಾಮಾನ್ಯ ಸುದ್ದಿಯಾಗುತ್ತಿದೆ. ಇದು ಕೇವಲ ಒಂದು ಕುಟುಂಬದ ಸಮಸ್ಯೆಯಲ್ಲ; ಸಮಾಜದ ಮುಂದೆ ನಿಂತಿರುವ ಗಂಭೀರ ಪ್ರಶ್ನೆಯಾಗಿದೆ.

**ಸಂಬಂಧಗಳಿಗೆ ಏನಾಗಿದೆ?:** ಒಮ್ಮೆ ಮದುವೆ ಎಂದರೆ ಜೀವನಪೂರ್ತಿ ಜೊತೆಯಾಗಿ ನಡೆಯುವ ಸಂಕಲ್ಪವಾಗಿತ್ತು. ಸುಖದಲ್ಲೂ ದುಃಖದಲ್ಲೂ ಒಬ್ಬರಿಗೊಬ್ಬರು ಬೆನ್ನೆಲುಬಾಗಿ ನಿಲ್ಲುವ ವಾಗ್ದಾನವಾಗಿತ್ತು. ಆದರೆ ಇಂದು ಪ್ರೀತಿ ಮತ್ತು ವಿಶ್ವಾಸದ ಜಾಗದಲ್ಲಿ ಅಹಂಕಾರ, ತಾಳ್ಮೆಯ ಜಾಗದಲ್ಲಿ ಆತುರ, ಅರ್ಥೈಸಿಕೊಳ್ಳುವಿಕೆಯ ಜಾಗದಲ್ಲಿ ಅತಿಯಾದ ನಿರೀಕ್ಷೆಗಳು ಹೆಚ್ಚಾಗುತ್ತಿರುವುದು ಕಾಣಿಸುತ್ತಿದೆ.

ಇಂದಿನ ಯುವಜನತೆ ವಿದ್ಯಾವಂತರಾಗಿದ್ದಾರೆ, ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. ಇದು ಸಮಾಜದ ಉತ್ತಮ ಬೆಳವಣಿಗೆಯೇ ಸರಿ. ಆದರೆ ಕೆಲವೊಮ್ಮೆ ಸ್ವಾತಂತ್ರ್ಯದ ಅರ್ಥವನ್ನು ತಪ್ಪಾಗಿ ಅರ್ಥೈಸಿಕೊಳ್ಳುವ ಪ್ರವೃತ್ತಿಯೂ ಬೆಳೆಯುತ್ತಿದೆ. ಸಮಸ್ಯೆ ಎದುರಾದಾಗ ಪರಿಹಾರ ಹುಡುಕುವುದಕ್ಕಿಂತ ಸಂಬಂಧದಿಂದ ದೂರವಾಗುವುದೇ ಮೊದಲ ಆಯ್ಕೆಯಾಗುತ್ತಿರುವುದು ವಿಷಾದನೀಯ.

**ಮದುವೆ ಎಂದರೆ ಹೊಂದಾಣಿಕೆಯ ಕಲೆ**

ಮದುವೆ ಎಂದರೆ ಪರಿಪೂರ್ಣ ವ್ಯಕ್ತಿಯನ್ನು ಹುಡುಕುವ ಪ್ರಯತ್ನವಲ್ಲ. ಅಪೂರ್ಣ ವ್ಯಕ್ತಿಯನ್ನು ಅರ್ಥಮಾಡಿಕೊಂಡು, ಅವರೊಂದಿಗೆ ಜೀವನವನ್ನು ಕಟ್ಟಿಕೊಳ್ಳುವ ಕಲೆ. ಇಬ್ಬರು ವ್ಯಕ್ತಿಗಳ ಆಲೋಚನೆ, ಅಭ್ಯಾಸ, ಕನಸು ಮತ್ತು ನಿರೀಕ್ಷೆಗಳು ವಿಭಿನ್ನವಾಗಿರುವುದು ಸಹಜ. ಆ ಭಿನ್ನತೆಗಳ ಮಧ್ಯೆ ಸಮತೋಲನ ಕಂಡುಕೊಳ್ಳುವುದೇ ವೈವಾಹಿಕ ಜೀವನದ ಸೌಂದರ್ಯ.

**ಸಾಮಾಜಿಕ ಜಾಲತಾಣಗಳ ಪ್ರಭಾವ**

ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಕೂಡ ಸಂಬಂಧಗಳ ಮೇಲೆ ದೊಡ್ಡ ಪ್ರಭಾವ ಬೀರುತ್ತಿವೆ. ಇತರರ ಜೀವನವನ್ನು ನೋಡಿ ತಮ್ಮ ಜೀವನವನ್ನು ಅಳೆಯುವ ಅಭ್ಯಾಸ ಹೆಚ್ಚಾಗಿದೆ. ಫೋಟೋಗಳಲ್ಲಿ ಕಾಣುವ ನಗು ಮತ್ತು ವಿಡಿಯೋಗಳಲ್ಲಿ ಕಾಣುವ ಸಂತೋಷವೇ ನಿಜ ಜೀವನವಲ್ಲ ಎಂಬ ಸತ್ಯವನ್ನು ಅನೇಕರು ಮರೆತಿದ್ದಾರೆ.

ಪ್ರತಿಯೊಂದು ಕುಟುಂಬದಲ್ಲೂ ಸಮಸ್ಯೆ ಗಳು ಇರುತ್ತವೆ. ಆದರೆ ಆ ಸಮಸ್ಯೆಗಳನ್ನು ಹೇಗೆ ಎದುರಿಸಲಾಗುತ್ತದೆ ಎಂಬುದೇ ಸಂಬಂಧದ ಬಲವನ್ನು ನಿರ್ಧರಿಸುತ್ತದೆ.

**ಸಂವಹನದ ಕೊರತೆ:** ಹಿಂದೆ ಕುಟುಂಬ ಸದಸ್ಯರು ಒಂದೇ ಜಾಗದಲ್ಲಿ ಕುಳಿತು ಮಾತನಾಡುತ್ತಿದ್ದರು. ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು. ಇಂದು ಒಂದೇ ಮನೆಯಲ್ಲಿದ್ದರೂ ಪ್ರತಿಯೊಬ್ಬರೂ ಮೊಬೈಲ್ ಪರದೆಯೊಳಗೆ ಸೀಮಿತರಾಗುತ್ತಿದ್ದಾರೆ.

ಮಾತು ಕಡಿಮೆಯಾದಾಗ ತಪ್ಪು ಅರ್ಥಗಳು ಹೆಚ್ಚಾಗುತ್ತವೆ. ತಪ್ಪು ಅರ್ಥಗಳು ಹೆಚ್ಚಾದಾಗ ಮನಸ್ಸುಗಳು ದೂರವಾಗುತ್ತವೆ. ಮನಸ್ಸುಗಳು ದೂರವಾದಾಗ ಸಂಬಂಧಗಳು ದುರ್ಬಲವಾಗುತ್ತವೆ.

**ಸಂಬಂಧ ಉಳಿಯಲು ಬೇಕಾಗಿರುವುದು**

ಸಂಬಂಧವನ್ನು ಉಳಿಸಿಕೊಳ್ಳಲು ಪ್ರೀತಿ ಮಾತ್ರ ಸಾಕಾಗುವುದಿಲ್ಲ. ಅದರೊಂದಿಗೆ:




* ತಾಳ್ಮೆ
* ಪರಸ್ಪರ ಗೌರವ
* ವಿಶ್ವಾಸ
* ಹೊಂದಾಣಿಕೆ
* ಕ್ಷಮಿಸುವ ಗುಣ
* ಮುಕ್ತ ಸಂವಹನ

ಇವೆಲ್ಲವೂ ಅಗತ್ಯ.

ಮದುವೆಯ ಮೊದಲ ದಿನದಿಂದಲೇ ಎಲ್ಲವೂ ಸುಂದರವಾಗಿರುವುದಿಲ್ಲ. ಕೆಲವೊಮ್ಮೆ ಭಿನ್ನಾಭಿಪ್ರಾಯಗಳು ಬರುತ್ತವೆ, ಕೆಲವೊಮ್ಮೆ ಕಣ್ಣೀರು ಬರುತ್ತದೆ. ಆದರೆ ಅವೆಲ್ಲವನ್ನು ದಾಟಿ ಜೊತೆಯಾಗಿ ಸಾಗುವುದೇ ನಿಜವಾದ ಗೆಲುವು.

**ಪ್ರದರ್ಶನ ಹೆಚ್ಚಾಗಿದೆ, ಸಂಬಂಧದ ಗಟ್ಟಿತನ ಕಡಿಮೆಯಾಗಿದೆ:** ಇಂದು ಕೆಲವೊಮ್ಮೆ ಮದುವೆಗಳು ಸಂಭ್ರಮಕ್ಕಿಂತ ಪ್ರದರ್ಶನದ ವೇದಿಕೆಗಳಾಗುತ್ತಿವೆ. ಮಂಟಪದ ಅಲಂಕಾರಕ್ಕೆ ನೀಡುವ ಮಹತ್ವವನ್ನು ಮನಸ್ಸಿನ ಅಲಂಕಾರಕ್ಕೆ ನೀಡಲಾಗುತ್ತಿಲ್ಲ. ಊಟದ ವೈಭವಕ್ಕೆ ನೀಡುವ ಗಮನವನ್ನು ಸಂಬಂಧದ ಗಟ್ಟಿತನಕ್ಕೆ ನೀಡಲಾಗುತ್ತಿಲ್ಲ.

ಪರಿಣಾಮವಾಗಿ ಹೊರಗೆ ಎಲ್ಲವೂ ಸುಂದರವಾಗಿ ಕಾಣಿಸಿದರೂ, ಒಳಗೆ ಸಂಬಂಧಗಳು ದುರ್ಬಲವಾಗುತ್ತಿವೆ.

**ಕೋರ್ಟ್ ಅಂತಿಮ ಆಯ್ಕೆಯಾಗಲಿ:** ಕೋರ್ಟ್ ಮೆಟ್ಟಿಲು ಏರುವುದು ತಪ್ಪಲ್ಲ. ಅನ್ಯಾಯ, ಹಿಂಸೆ, ಕಿರುಕುಳ ಅಥವಾ ಗಂಭೀರ ಸಮಸ್ಯೆಗಳಿದ್ದಾಗ ಕಾನೂನಿನ ನೆರವು ಅತ್ಯಗತ್ಯ. ಆದರೆ ಸಣ್ಣ ಭಿನ್ನಾಭಿಪ್ರಾಯಗಳು, ಅಹಂಕಾರದ ಸಂಘರ್ಷಗಳು ಮತ್ತು ಮಾತಿನ ಕೊರತೆಯಿಂದ ಸಂಬಂಧಗಳು ಮುರಿಯುತ್ತಿರುವುದು ಸಮಾಜಕ್ಕೆ ಆತಂಕಕಾರಿ ಬೆಳವಣಿಗೆಯಾಗಿದೆ.

**ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು:** ಇಂದು ಪ್ರತಿಯೊಬ್ಬರೂ ತಮ್ಮನ್ನು ತಾವು ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗಿದೆ:

* ಮದುವೆ ಎಂಬ ಬಂಧನವನ್ನು ನಾವು ಎಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇವೆ?
* ಜೀವನ ಸಂಗಾತಿಯನ್ನು ನಿಜವಾಗಿ ಯೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿ ದ್ದೇವೆಯೇ?
* ನಮ್ಮ ನಿರೀಕ್ಷೆಗಳಿಗಿಂತ ಅವರ ಭಾವನೆಗಳಿಗೆ ಸ್ಥಾನ ನೀಡುತ್ತಿದ್ದೇವೆಯೇ?
* ಸಮಸ್ಯೆ ಬಂದಾಗ ಪರಿಹಾರ ಹುಡುಕುತ್ತಿದ್ದೇವೆಯೇ ಅಥವಾ ದೂರವಾಗುತ್ತಿದ್ದೇವೆಯೇ?

**ಸಮಾಜಕ್ಕೆ ಸಂದೇಶ:** ಸಂಬಂಧಗಳು ಒಂದು ದಿನದಲ್ಲಿ ನಿರ್ಮಾಣವಾಗುವುದಿಲ್ಲ. ಅವು ವರ್ಷಗಳ ಪ್ರೀತಿ, ವಿಶ್ವಾಸ ಮತ್ತು ತಾಳ್ಮೆಯಿಂದ ಬೆಳೆಯುತ್ತವೆ. ಒಂದು ಗಿಡಕ್ಕೆ ಪ್ರತಿದಿನ ನೀರು ಹಾಕಿದಂತೆ, ಸಂಬಂಧಗಳಿಗೂ ಪ್ರತಿದಿನ ಕಾಳಜಿ ಬೇಕು. ನಿರ್ಲಕ್ಷ್ಯ ಮಾಡಿದರೆ ಗಿಡ ಒಣಗುವಂತೆ, ಸಂಬಂಧಗಳೂ ಒಣಗುತ್ತವೆ.

ಹಣ, ಹುದ್ದೆ ಮತ್ತು ವೈಭವ ಜೀವನದ ಒಂದು ಭಾಗ ಮಾತ್ರ. ಆದರೆ ಸಂಕಷ್ಟದ ಸಮಯದಲ್ಲಿ ನಮ್ಮ ಜೊತೆ ನಿಲ್ಲುವುದು ಸಂಬಂಧಗಳೇ. ಮನಸ್ಸಿಗೆ ನೆಮ್ಮದಿ ನೀಡುವುದು ಸಂಬಂಧಗಳೇ. ಜೀವನಕ್ಕೆ ಅರ್ಥ ನೀಡುವುದು ಸಂಬಂಧಗಳೇ.

ಅದ್ದೂರಿ ಮದುವೆಗಳು ನಡೆಯಲಿ, ಸಂಭ್ರಮ ಇರಲಿ, ಸಂತೋಷ ಇರಲಿ. ಆದರೆ ಅವು ಕೇವಲ ಒಂದು ದಿನದ ಪ್ರದರ್ಶನವಾಗಬಾರದು. ಮದುವೆಯ ನಿಜವಾದ ಯಶಸ್ಸು ಮಂಟಪದ ವೈಭವದಲ್ಲಿ ಅಲ್ಲ; ಜೀವನದ ಪ್ರತಿದಿನದ ಸಣ್ಣ ಸಣ್ಣ ಕ್ಷಣಗಳಲ್ಲಿ ಅಡಗಿದೆ.

ಇಂದು ಕೋರ್ಟ್ ಮೆಟ್ಟಿಲು ಏರುತ್ತಿರುವ ಸಂಬಂಧಗಳನ್ನು ನೋಡಿದಾಗ ಒಂದು ಪ್ರಶ್ನೆ ನಮ್ಮನ್ನು ಕಾಡುತ್ತದೆ:

ಇದು ಕೇವಲ ಕೆಲವು ವ್ಯಕ್ತಿಗಳ ವೈಫಲ್ಯವೇ, ಅಥವಾ ಸಮಾಜವಾಗಿ ನಾವು ಸಂಬಂಧಗಳ ಮೌಲ್ಯವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದ್ದೇವೆಯೇ?.

# ಮಳೆಯ ಆ ದಿನಗಳ ನೆನಪು



| ಪುಷ್ಪ ಪ್ರಸಾದ್


ವಾರಗಟ್ಟಲೇ ನಿರಂತರವಾಗಿ ಮಳೆ ಬೀಳುವ ಕಾಲ ಆಗ. ಮಳೆಗಾಲ ಆರಂಭವಾಯಿತೆಂದರೆ ಪ್ರಕೃತಿಯೇ ನಗುನಗುತ್ತಾ ಹಸಿರು ಉಡುಗೆಯನ್ನು ತೊಡುತ್ತದೆ. ಗುಡ್ಡಗಾಡಿನ ಹಳ್ಳ-ಕೊಳ್ಳಗಳು ತುಂಬಿ ಹರಿಯುವ ದೃಶ್ಯ, ಮಣ್ಣಿನ ಸುವಾಸನೆ ಹಾಗೂ ಮಳೆಯ ಅಂದಿನ ನೆನಪುಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಈಗ ಅಂತಹ ಮಳೆಯನ್ನು ಇತ್ತೀಚೆಗೆ ನಾವೆಲ್ಲೂ ಕಂಡಿಲ್ಲ. ಆ ಮಳೆಯಲ್ಲೂ ನಾನು, ನನ್ನ ಸ್ನೇಹಿತರೆಲ್ಲ ಸುಮಾರು ಎರಡು-ಮೂರು ಕಿಲೋಮೀಟರ್ ಗಳಷ್ಟು ದೂರದಲ್ಲಿರುವ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದೆವು. ಈಗಿನಂತೆ ಬಣ್ಣ ಬಣ್ಣದ ಛತ್ರಿ, ಬಣ್ಣ ಬಣ್ಣದ ರೈನ್ ಕೋಟ್, ನಮಗಿದ್ದಿಲ್ಲ. ಈಗಿನ ಮಕ್ಕಳಿಗೆ ಇರುವಂತೆ ನಮಗೆ ಶಾಲೆಗೆ ಹೇ?ಗಲು ಯಾವ ವಾಹನಗಳು ಇದ್ದಿಲ್ಲ. ಆಗಿನ ಸ್ಕೂಲ್ ಬ್ಯಾಗ್ ದೊಡ್ಡ ಗೋಣಿಚೀಲದಂತೆ ಇರುತಿತ್ತು. ಕೆಲವರೆಲ್ಲಾ ಪುಸ್ತಕಗಳನ್ನು ಹೊಲಕ್ಕೆ ಬಿತ್ತಲು ತಂದ ಬೀಜದ ಚೀಲಗಳಲ್ಲಿ ತುಂಬಿಕೊಂಡು ಬರುತ್ತಿದ್ದರು. ಅಂದು ಎಂತಹ ಮಳೆ ಬಂದರೂ ಪುಸ್ತಕಗಳು ನೆನೆಯದಂತೆ ಜಾಗರೂಕತೆಯಿಂದ ತೆಗೆದುಕೊಂಡು ಹೋಗುತ್ತಿದ್ದೆವು. ಜೊತೆಗೆ ಗೋಣಿ ಚೀಲದ ರೀತಿಯ ಪ್ಲಾಸ್ಟಿಕ್ ಚೀಲವೊಂದನ್ನು ಜೊತೆಯಲ್ಲಿ ಒಯ್ಯುವುದು ಮಳೆಗಾಲದಲ್ಲಿ ಸಾಮಾನ್ಯವಾಗಿತ್ತು. ಶಾಲೆಗೆ ಹೋಗುವಾಗ ಅಥವಾ ಶಾಲೆಯಿಂದ ಬರುವ ಸಮಯದಲ್ಲಿ ಮಳೆ ಬಂದರೆ ನಮಗೆ ತುಂಬಾ





ಸಂತಸ. ಅಂದು ಜಿಟಿ ಜಿಟಿ ಮಳೆಯಲ್ಲೇ ಛತ್ರಿ ಹಿಡಿದು ಶಾಲೆಗೆ ಹೋಗುವುದು, ಗಾಳಿಗೆ ಛತ್ರಿ ತಲೆಕೆಳಗಾಗುವುದು, ದಾರಿಯಲ್ಲಿ ಬಟ್ಟೆ ನೆನೆಸಿಕೊಳ್ಳುವುದು ಒಂದು ರೀತಿಯ ಮೋಜು. ಹೊಲಗದ್ದೆಗಳ ಬದಿಗಳಲ್ಲಿನ ಕಾಲುದಾರಿಯಲ್ಲಿ, ಸಣ್ಣ ಕಾಡಿನ ನಡುವೆ, ನದಿಯ ದಂಡೆಯ ಮೇಲೆ ಸಾಗುತ್ತಾ ಮನೆ ಸೇರುತ್ತಿದ್ದ ನಮಗೆ ಕುಷಿಯೋ ಕುಷಿ. ಆ ದಿನಗಳಲ್ಲಿ ನಾವೆಂದೂ ?ರೇನ್ ರೇನ್ ಗೋ ಅವೇ? ಎಂದು ಹೇಳಿದವರಲ್ಲ. ಮಳೆ ಬರುವ ಮುನ್ಸೂಚನೆ ಕಂಡರೆ ಸಾಕು ಎಲ್ಲ ಮಕ್ಕಳು ಸೇರಿ ಹಾಡುವ ಒಂದೇ ಹಾಡು ?ಬಾರೋ ಬಾರೋ ಮಳೆರಾಯ, ಹುಯ್ಯೋ ಹುಯ್ಯೋ ಮಳೆರಾಯ. ಹೀಗೆ ಹಲವಾರು ಮಳೆಯ ಹಾಡುಗಳನ್ನು ಸಲೀಸಾಗಿ ಎಲ್ಲರೂ ಹಾಡುತ್ತ ಕುಣಿದು ಸಂಭ್ರಮಿಸುತ್ತಿದ್ದೆವು. ಮಳೆ ನೀರು ಹರಿಯುವ ತೊರೆಗಳಲ್ಲಿ ಮೊದಲೇ ತಯಾರಿಸಿಕೊಂಡು ಬಂದಿದ್ದ ಕಾಗದದ ದೋಣಿಗಳನ್ನು ಬಿಡುವ ಆಟವೇ ಒಂಥರಾ ಮಜ. ಅಲ್ಲಿ ನಿಲ್ಲುತ್ತಿದ್ದ ನೀರಿನ ಗುಂಡಿಗಳಲ್ಲಿ ಜಿಗಿಯುವುದೆಂದರೆ ಬಹಳ ಕುಷಿ. ದೊಡ್ಡ ಗುಂಡಿಗಳಿದ್ದರೆ 4-5 ಕಲ್ಲುಗಳನ್ನು ಎಸೆದು ಬರುವವರೆಗೂ ಸಮಾಧಾನವಾಗುತ್ತಿರಲಿಲ್ಲ. ಅಲ್ಲಲ್ಲಿ ಒಟಗುಡುವ ಕಪ್ಪೆಗಳಿಗೆ ಮಕ್ಕಳದೆಲ್ಲಾ ದೊಡ್ಡ ಕಾಟ. ಮಳೆಯಲ್ಲೂ ಕೂಡಾ ಇಂತಹ ಮೋಜಿನ ಆಟಗಳನ್ನು ಆಡದೇ ಇರುತ್ತಿರಲಿಲ್ಲ. ಆಗ ಮಳೆ ಎಂದರೆ ಅಷ್ಟೊಂದು ಸಂಭ್ರಮ ಆಗ. ಮಳೆಯಲ್ಲಿ ನೆನೆದರೂ ನೆಗಡಿ ಜ್ವರ ಬಂದಂತಹ ಸಂದರ್ಭಗಳೇ ಕಡಿಮೆ ಎನ್ನಬಹುದು. ಒಮ್ಮೆಯಂತೂ ಶಾಲೆ ಬಿಟ್ಟ ಗಳಿಗೆಯಿಂದ ಪ್ರಾರಂಭವಾದ ಮಳೆ, ನಾವು ಮನೆ ತಲುಪುವವರೆಗೂ ಹಾಗೆಯೇ ಸುರಿಯುತ್ತಿತ್ತು. ಅದೇ ಮಳೆಯಲ್ಲಿ ನಾವು ನೆನೆದುಕೊಂಡು ಬಂದು ಮನೆ ಸೇರಿದ್ದು ಈಗಲೂ ಆ ಸಂದರ್ಭವನ್ನು ಮರೆಯಲು ಸಾಧ್ಯವಿಲ್ಲ. ಮಳೆಯಲ್ಲಿಯೇ ಹೊಲ ಗದ್ದೆಯ ಕೆಲಸಗಳನ್ನು ಮಾಡುತ್ತಿದ್ದ ಜನರನ್ನು ಕಂಡು ತುಂಬಾ ಸಂತೋಷವಾಗುತ್ತಿತ್ತು. ಮನೆಗೆ ಬಂದ ನಂತರ ಅಮ್ಮ ಮಾಡಿದ ಬಿಸಿ ಬಿಸಿ ಕಾಫಿಯ ಜೊತೆ ಕಜ್ಜಾಯ ಸೇವಿಸಿ ಮಳೆಯ ತಂಪಿನಲಿ ಬೆಚ್ಚಗೆ ಓದುತ್ತಾ ಕುಳಿತರೆ ತಂದೆ ತಾಯಂದಿರಿಗೆ ಅದೆಷ್ಟು ಆನಂದ. ಇನ್ನು ಶಾಲೆಗೆ ರಜೆ ಬಂದರೆ ತಂಪಾದ ವಾತಾವರಣದಲ್ಲಿ ಕಿಟಕಿಯಿಂದ ಮಳೆಯನ್ನು ನೋಡುತ್ತಾ, ಅಮ್ಮ ಮಾಡಿದ ಬಿಸಿ ಬಿಸಿ ಕಾಫಿ ಕುಡಿಯುತ್ತಾ, ಹುರಿದ ಹಲಸಿನ ಬೀಜಗಳ ಮೆಲ್ಲುತ್ತಾ, ಕುಳಿತುಕೊಳ್ಳುವುದೇ ಒಂದು ಅದ್ಭುತ ಅನುಭವ. ಮಳೆಯ ಅಂದಿನ ನೆನಪುಗಳನ್ನು ನೆನಪಿಸಿಕೊಂಡರೆ ಈಗಲೂ ಮೈ ರೋಮಾಂಚನಗೊಂಡು ಅಂದಿನ ಕಾಲದ ಘಟನೆಗಳತ್ತ ಕೊಂಡೊಯ್ಯುತ್ತದೆ. ಆದರೆ ಇಂದು ಅಂತಹ ಮಳೆ ಬಾರದೆ ಭೂಮಿ ಬರಡಾಗುವಂತೆ ಬರಗಾಲದ ಮುನ್ಸೂಚನೆ ಕಾಣುತ್ತಿದೆ. ಮಳೆಯೆಂದರೆ ಬಾಲ್ಯದ ನೆನಪು ಒತ್ತರಿಸಿ, ಒತ್ತರಿಸಿ ಬರುವುದು. ಆಹಾ ಎಂಥಾ ಮಳೆ ! ಅಂತಹ ಮಳೆಯ ಸಂಭ್ರಮವನ್ನು ಇಂದು ಮತ್ತೆ ಆನಂದಿಸಲುಂಟೇ?

# 40ರ ಹರೆಯದ ಗ್ಲೋಬಲ್ ಹೀರೊ!



| ಡಾ.ಸುಧಾಕರ.ಜಿ.ಲಕ್ಕವಳ್ಳಿ

**ಸ್ಫೂರ್ತಿ ಸುಧೆ - 51**

ಬದುಕಿನ ಕಡಿದಾದ ಹಾದಿಯಲ್ಲಿ ಸಣ್ಣ ಹಿನ್ನಡೆಗೂ ಧೃತಿಗೆಟ್ಟು ನಿರಾಸೆಯ ಕತ್ತಲಿಗೆ ಶರಣಾಗುವವರ ನಡುವೆ,ಫಿಫಾ ವಿಶ್ವಕಪ್-2026ರ ಅಂಗಳದಲ್ಲಿ 40ರ ಹರೆಯದ ಗೋಲ್‌ಕೀಪರ್ ಒಬ್ಬರು ಇಡೀ ವಿಶ್ವವೇ ಬೆರಗಾಗುವಂತೆ ಇತಿಹಾಸ ಸೃಷ್ಟಿಸಿದ್ದಾರೆ. ಸಾಧನೆಯ ಹಂಬಲಕ್ಕೆ ವಯಸ್ಸು ಕೇವಲ ಸಂಖ್ಯೆಯಷ್ಟೇ ಎಂಬುದನ್ನು ಸಾಬೀತುಪಡಿಸಿದ ಆ ಅಪ್ರತಿಮ ಕಾವಲುಗಾರನೇ ಕೇಪ್ ವರ್ಡೆಯ ಜೋಸಿಮಾರ್ ಡಿಯಾಸ್,ಅಲಿಯಾಸ್ ವೊಜಿನ್ಹಾ. ವಿಶ್ವಕಪ್ ಕನಸಿಗೆ ಆರಂಭದಲ್ಲಿ ಎದುರಾಗಿದ್ದು ತಿರಸ್ಕಾರದ ಕಹಿಯೇ. ದೈಹಿಕ ಎತ್ತರ ಕಡಿಮೆ ಎಂಬ ಹೀಯಾಳಿಕೆಯನ್ನು ಮೆಟ್ಟಿ ನಿಂತ ಅವರು,ನಿರಂತರ ಪರಿಶ್ರಮದಿಂದ ತಮ್ಮ ನಲವತ್ತರ ಪ್ರಾಯದಲ್ಲಿ ಚೊಚ್ಚಲ ವಿಶ್ವಕಪ್ ಅಖಾಡಕ್ಕಿಳಿದು ಫಿಫಾ ಇತಿಹಾಸದಲ್ಲೇ ಪದಾರ್ಪಣೆ ಮಾಡಿದ ಎರಡನೇ ಅತಿ ಹಿರಿಯ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಇತ್ತೀಚೆಗೆ ಸ್ಪೇನ್ ವಿರುದ್ಧದ ಕದನದಲ್ಲಿ ಎದುರಾಳಿ ಪಡೆ 27 ಬಾರಿ ಗೋಲ್‌ಪೋಸ್ಟ್ ಮೇಲೆ ಭೀಕರ ದಾಳಿ ನಡೆಸಿತು. ಆದರೆ ಧೀಮಂತ ನಾಯಕನಂತೆ ಜಾಗರೂಕರಾಗಿದ್ದ ವೊಜಿನ್ಹಾ, ಉಕ್ಕಿನ ಗೋಡೆಯಂತೆ ನಿಂತು 7 ಅದ್ಭುತ ಸೇವ್‌ಗಳೊಂದಿಗೆ ಪಂದ್ಯವನ್ನು ಐತಿಹಾಸಿಕ 0-0 ಡ್ರಾ ಮಾಡಿಸಿದರು. ಒಂದೇ ರಾತ್ರಿ ಅವರ ಇನ್‌ಸ್ಟಾಗ್ರಾಮ್ ಫಾಲೋವರ್ಸ್ 50 ಲಕ್ಷ ದಾಟಿ ಜಾಗತಿಕ ಸೆನ್ಸೇಷನ್ ಆದರು!

ಛಲಬಿಡದ ವೊಜಿನ್ಹಾ ಅವರ ಈ ಯಶೋಗಾಥೆ ಯುವ ಪೀಳಿಗೆಗೆ ಅಪ್ರತಿಮ ಪ್ರೇರಣೆ. ಅಡೆತಡೆಗಳು ಎಷ್ಟೇ ಬರಲಿ, ಜಗತ್ತು ನಿರ್ಲಕ್ಷಿಸಿದರೂ;ಅಚಲ ಶ್ರದ್ಧೆ ಮತ್ತು ಕಾಯುವ ತಾಳ್ಮೆ ಇದ್ದರೆ ಇತಿಹಾಸದ ಪುಟದಲ್ಲಿ ನಿಮ್ಮ ಹೆಸರೂ ಸುವರ್ಣಾಕ್ಷರಗಳಲ್ಲಿ ಮೂಡುತ್ತದೆ ಎಂಬುದಕ್ಕೆ ಇವರೇ ಜೀವಂತ ಸಾಕ್ಷಿ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,